ವಿಜಯಪುರ | ಸಂಪುಟ 01 | ಸಂಚಿಕೆ 300 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಗುರುವಾರ, ಜನವರಿ 25, 2024



"ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಗೋಷ್ಠಿಗಳು ಸಮಾಜದಲ್ಲಿ ಮೌಲ್ಯಗಳನ್ನು ಹೆಚ್ಚಿಸುತ್ತವೆ. ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ಸಾಹಿತ್ಯ ಪರಿಷತ್ತು ನಿರಂತರ ಶ್ರಮಿಸುತ್ತಿರುವುದು ಅತ್ಯಂತ ಶ್ಲಾಘನೀಯ."

– ರಮೇಶ ಬಿದನೂರ
ಸಹಕಾರಿ ಧುರೀಣರು, ವಿಜಯಪುರ

### ಈ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆ | TMC ಮತ್ತು AAP ಏಕಾಂಗಿ ಸ್ಪರ್ಧೆಯ ಘೋಷಣೆ

# ಲೋಕಸಭೆಗೂ ಮುನ್ನ INDIA ಕೂಟಕ್ಕೆ ಆಘಾತ!

ನವದೆಹಲಿ: ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಂತರ ಪಂಜಾಬ್ ಸಿಎಂ ಭಗವಂತ್ ಮಾನ್ ಅವರು ಖ೭ಒಆಖ೦ ಮೈತ್ರಿಕೂಟಕ್ಕೆ ದೊಡ್ಡ ಶಾಕ್ ನೀಡಿದ್ದಾರೆ. ಈ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಭಗವಂತ್ ಮಾನ್ ಘೋಷಿಸಿದ್ದಾರೆ.

ಪಂಜಾಬ್‌ನ 13 ಸ್ಥಾನಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಭಗವಂತ್ ಮಾನ್ ಹೇಳಿದ್ದಾರೆ. ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ. ಪಂಜಾಬ್‌ನ 13 ಸ್ಥಾನಗಳಲ್ಲಿ ಆಪ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ನಾವು ರಾಜಿ ಮಾಡಿಕೊಳ್ಳುವುದಿಲ್ಲ. ಮಮತಾ ಬ್ಯಾನರ್ಜಿ ತಮ್ಮದೇ ಆದ ನಿರ್ಧಾರವನ್ನು ಹೊಂದಿದ್ದಾರೆ. ನಮಗೆ ನಮ್ಮದೇ ಆದ ನಿರ್ಧಾರವಿದೆ ಎಂದಿದ್ದಾರೆ.





ಮಾಹಿತಿಯ ಪ್ರಕಾರ, ಬಂಗಾಳದಲ್ಲಿ ಕಾಂಗ್ರೆಸ್ 10 ರಿಂದ 12 ಸ್ಥಾನಗಳನ್ನು ಕೇಳುತ್ತಿದೆ. ಆದರೆ ಮಮತಾ 2ಕ್ಕಿಂತ ಹೆಚ್ಚು ಸ್ಥಾನಗಳನ್ನು ನೀಡಲು ಸಿದ್ಧರಿಲ್ಲ. ಹೀಗಾಗಿ ಪಶ್ಚಿಮ ಬಂಗಾಳದಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

2019ರ ಚುನಾವಣೆಯಲ್ಲಿ ಟಿಎಂಸಿ 22 ಸ್ಥಾನಗಳನ್ನು, ಕಾಂಗ್ರೆಸ್ 2 ಸ್ಥಾನಗಳನ್ನು ಮತ್ತು ಬಿಜೆಪಿ 18 ಸ್ಥಾನಗಳನ್ನು ಗೆದ್ದಿದ್ದವು.

ಮಮತಾ ಅಲ್ಲದೆ, ನಿತೀಶ್ ಕುಮಾರ್ ಮತ್ತು ಅರವಿಂದ್ ಕೇಜ್ರಿವಾಲ್ ಅವರ ಪಕ್ಷ ಎಎಪಿ ಕೂಡ ಗರಿಷ್ಠ ಸ್ಥಾನಗಳ ಮೇಲೆ ಕಣ್ಣಿಟ್ಟಿದೆ. 16ಕ್ಕಿಂತ ಕಡಿಮೆ ಸ್ಥಾನಗಳಲ್ಲಿ ನಾವು ರಾಜಿ ಮಾಡಿಕೊಳ್ಳುವುದಿಲ್ಲ ಎಂದು ನಿತೀಶ್ ಅವರ ಪಕ್ಷ ಜೆಡಿಯು ಇತ್ತೀಚೆಗೆ ಹೇಳಿತ್ತು. ಗೆಲ್ಲುವ ಸ್ಥಾನಗಳಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಜೆಡಿಯು ಹೇಳಿದೆ.

# ವಿವಿಧ ಕಚೇರಿಗಳಿಗೆ ಡಿಸಿ ಟಿ.ಭೂಬಾಲನ್ ಧಿಡೀರ್ ಭೇಟಿ!

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದ ತಹಸೀಲ್ದಾರ ಕಚೇರಿ, ಉಪನೋಂದಣಿ ಕಚೇರಿ, ಭೂದಾಖಲೆಗಳ ಕಚೇರಿ, ಪುರಸಭೆ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಬುಧವಾರ ಧಿಡೀರ್ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿರುವ ತಹಸೀಲ್ದಾರ ಕಚೇರಿಗೆ ಭೇಟಿ ನೀಡಿ ಬಾಕಿಯಿರುವ ಕಂದಾಯ ಪ್ರಕರಣಗಳ ಬಗ್ಗೆ ತಹಸೀಲ್ದಾರರಿಂದ ಮಾಹಿತಿ ಪಡೆದುಕೊಂಡರು. ನಂತರ ಉಪನೋಂದಣಿಯಾಧಿಕಾರಿ ಕಚೇರಿಗೆ ಭೇಟಿ ನೀಡಿದಾಗ ಹೆಚ್ಚು ಜನರು ಕಂಡು ಎಲ್ಲರೂ ಕಚೇರಿ ಕೆಲಸಕ್ಕೆ ಬಂದವರೋ ಅಥವಾ ಬೇರೆ ಜನರು ಇರುವರೋ ಎಂದು ಸಂದೇಹ ಬಂದು ಎಲ್ಲರ ಗುರುತಿನ ಚೀಟಿಯನ್ನು ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡಿದರು.

ಉಪನೋಂದಣಾಧಿಕಾರಿ ದ್ಯಾವಪ್ಪ ಅವರಿಗೆ ಕಚೇರಿಯಲ್ಲಿ ಆಸ್ತಿ ಮಾರಾಟಗಾರರು, ಖರೀದಾರರು, ಸಾಕ್ಷಿದಾರರು ಹಾಗೂ ದಾಖಲಾತಿಗೆ ಸಂಬಂಧಿಸಿದವರು ಮಾತ್ರ ಇರುವಂತೆ ನೋಡಿಕೊಳ್ಳಬೇಕು. ಅನಾವಶ್ಯಕವಾಗಿ ಜನರು ಇರದಂತೆ ನೋಡಿಕೊಳ್ಳಬೇಕೆಂದು ಖಡಕ್ಕಾಗಿ ಸೂಚನೆ ನೀಡಿದರು. ಉಪನೋಂದಣಾಧಿಕಾರಿ ಕಚೇರಿಯಲ್ಲಿ ಜನರು ಯಾವ ಮಧ್ಯವರ್ತಿಗಳ ಮೂಲಕ ತಮ್ಮ ಕೆಲಸಗಳನ್ನು ಮಾಡಿಕೊಳ್ಳದೇ ನೇರವಾಗಿ ಅಧಿಕಾರಿಗಳನ್ನು ಸಂಪರ್ಕಿಸಿ ತಮ್ಮ ಕೆಲಸಗಳನ್ನು ಮಾಡಿಕೊಳ್ಳುವಂತೆ ಜನರಿಗೆ ಜಿಲ್ಲಾಧಿಕಾರಿಗಳು ಜನರಿಗೆ ಹೇಳಿದರು.



ಭೂಮಾಪನ ಇಲಾಖೆಯ ಕಚೇರಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ರಿಕಾರ್ಡ್ ರೂಂ ಪರಿಶೀಲಿಸಿದ ನಂತರ ಸೀಟ್ ಸ್ಕ್ಯಾನಿಂಗ್ ಮಾಡುವುದನ್ನು ಪರಿಶೀಲಿಸಿದರು.

ಪಟ್ಟಣದ ಇವಣಗಿ ರಸ್ತೆಯಲ್ಲಿರುವ ಪುರಸಭೆ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಕಸ ವಿಲೇವಾರಿ ಘಟಕವನ್ನು ಪರಿಶೀಲಿಸಿ ಪುರಸಭೆ ಮುಖ್ಯಾಧಿಕಾರಿಗಳಿಂದ ಘನತ್ಯಾಜ್ಯ ವಿಲೇವಾರಿ ಘಟಕದ ಮಾಹಿತಿ ಪಡೆದುಕೊಂಡ ನಂತರ ಕಸವನ್ನು ಸರಿಯಾಗಿ ಸಂಸ್ಕರಿಸುವಂತೆ ಕ್ರಮ ವಹಿಸಬೇಕು. ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ತಯಾರಾಗುವ ಗೊಬ್ಬರಕ್ಕೆ ಸೂಕ್ತ ದರ ನಿಗದಿ ಪಡಿಸಿ ರೈತಬಾಂಧವರಿಗೆ ಗೊಬ್ಬರ ಮಾರಾಟ ಮಾಡಬೇಕು. ಪುರಸಭೆಯು ವಿವಿಧ ತೆರಿಗೆ ತುಂಬುವ ಬಗ್ಗೆ, ಅಂಗಡಿಕಾರರು ತಮ್ಮ ಅನುಮತಿ ಪತ್ರದ ನವೀಕರಣ ಮಾಡಿಕೊಳ್ಳುವ ಕುರಿತು ಜಾಗೃತಿ ಮೂಡಿಸುವ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಾಧಿಕಾರಿ ಎಚ್.ಎಸ್.ಚಿತ್ತರಗಿ ಅವರಿಗೆ ಸೂಚಿಸಿದರು.


ಮಿನಿ ವಿಧಾನಸೌಧದ ಆವರಣದಲ್ಲಿರುವ ಶೌಚಾಲಯ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಕುರಿತು ಜಿಲ್ಲಾಧಿಕಾರಿಗಳಿಗೆ ಸುದ್ದಿಗಾರರು ಗಮನಕ್ಕೆ ತಂದಾಗ ಜನರಿಗೆ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ತಹಸೀಲ್ದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕಂದಾಯ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲಶೆಟ್ಟಿ, ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ, ಗ್ರೇಡ್-2 ತಹಸೀಲ್ದಾರ ಜಿ.ಎಸ್.ನಾಯಕ, ಎಡಿಎ□□□ರ್ ಬಿ.ಬಿ.ವಗ್ಗಣ್ಣನವರ, ಮುಖ್ಯಾಧಿಕಾರಿ ಎಚ್.ಎಸ್.ಚಿತ್ತರಗಿ, ಪುರಸಭೆ ವ್ಯವಸ್ಥಾಪಕ ವಿರೇಶಹಟ್ಟಿ, ಪುರಸಭೆ ಕಿರಿಯ ಆರೋಗ್ಯ ನಿರೀಕ್ಷಕ ಮಹೇಶ ಹಿರೇಮಠ ಇತರರು ಇದ್ದರು.

### ರಾಜ ನುಡಿ

ಪ್ರತಿ ಹೆಣ್ಣು ಮಗುವಿನ ನಗುಮೊಗವು ದೇವರ ಇರುವಿಕೆಯ ಹಸ್ತಾಕ್ಷರದಂತೆ. ಅವಳು ಮಮತೆಯು ಮಂದಿರದೊಳಗಿನ ಸಾಕ್ಷಾತ್ ಮೂರ್ತಿಯಂತೆ. ಅವಳು ದೇವರ ಮುಂದುವರಿದ ಭಾಗದಂತೆ. ಹೆಣ್ಣು ಮಗುವಿನ ಹಕ್ಕುಗಳನ್ನು ಗೌರವಿಸೋಣ, ಅವಳನ್ನು ಹೃದಯದಲ್ಲಿ ಹೊತ್ತು ನಡೆಸೋಣ..

-ಡಾ. ರಾಜಶೇಖರ ನಾಗೂರ



### ವಚನ ಚಿಂತನ 286

**ಮಂಗಳದ ಮಹಾಬೆಳಗಿನ ನಿಜಮುಕ್ತಿ**

*ಅಯ್ಯಾ, ನಿಮ್ಮ ಚರಣವಿಡಿದು ಮನವ ನಿಲಿಸಿದೆ,*
*ತನುವ ಮರೆದೆ, ಮಹಾಘನವ ಕಂಡೆ;*
*ಲಿಂಗದನೆಲೆವಿಡಿದೆ.*
*ಅಂಗವ ಲಿಂಗವೆಂದು ನೋಡಲು ಕಂಗಳ ಮುಂದಣ ಬೆಳಗೇ ಲಿಂಗವಾಗಿ,*
*ಆ ಕಂಗಳ ಮುಂದಣ ಬೆಳಗ ನೋಡಿಹೆನೆಂದು ಸಂಗಸುಖವ ಮರೆದು,*
*ಆ ಮಂಗಳದ ಮಹಾಬೆಳಗಿನಲ್ಲಿ*
*ನಾ ನಿಜಮುಕ್ತಳಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.*

*– ಲಿಂಗಮ್ಮನವರು*

ಇಷ್ಟಲಿಂಗದ ಮೂಲಕ ಮಂಗಳ ಮಹಾಬೆಳಗು ಕಾಣುವುದು ಒಂದು ಯೋಗಸಾಧನವಾಗಿದೆ, ಇದನ್ನು ಶರಣರು ಶಿವಯೋಗವೆಂದಿದ್ದಾರೆ. ಹರಿವ ಮನವನ್ನು ಒಂದೆಡೆ ನಿಲ್ಲಿಸುವ ಸಾಧನವಾಗಿ ಕೆಲವರು ಇಷ್ಟಲಿಂಗವನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ, ಈ ವಚನದಲ್ಲಿ ಲಿಂಗಮ್ಮನವರು ಸ್ಪಷ್ಟವಾಗಿ ವಿವರಿಸಿದಂತೆ ಪ್ರಾರಂಭದಲ್ಲಿ ಮನವ ನಿಲಿಸಿದೆ, ನಂತರ ತನುವ ಮರೆದೆ, ಆಗ ಅಂಗದೊಳಗೆ ಮಹಾಘನವ ಕಂಡೆ; ನಂತರ ಅಂಗಭಾವ ಮರೆಯುವದಕ್ಕೋಸ್ಕರ ಲಿಂಗದನೆಲೆವಿಡಿದೆ. ತಕ್ಷಣ ಅಂಗವ ಲಿಂಗವೆಂದು ನೋಡಲು ಕಂಗಳ ಮುಂದಣ ಬೆಳಗೇ ಲಿಂಗವಾಗಿ ಕಂಡುಬಂದಿತು. ಆ ಕಂಗಳ ಮುಂದಣ ಬೆಳಗ ನೋಡಿಹೆನೆಂದು ಸಂಗಸುಖವ ಮರೆದು, ಆ ಮಂಗಳದ ಮಹಾಬೆಳಗಿನಲ್ಲಿ ನಾ ನಿಜಮುಕ್ತಳಾದೆನಯ್ಯಾ ಎನ್ನುವಲ್ಲಿ ಇಷ್ಟಲಿಂಗದ ಮೂಲಕ ನಿಜಮುಕ್ತರಾಗುವ ಬಗೆಯನ್ನು ವಿವರಿಸಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಸಮಾನ ವೇತನ ಜಾರಿಗೆ ಆಗ್ರಹಿಸಿ ಕಾರ್ಮಿಕರ ಮನವಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಎಲ್ಲಾ ಗುತ್ತಿಗೆ ಮುನಸಿಪಲ್ ಕಾರ್ಮಿಕರ ನೇರ ಪಾವತಿ ಅಡಿಯಲ್ಲಿ ಸಮಾನ ವೇತನ ಜಾರಿಗೆ ಒತ್ತಾಯಿಸಿ ವಿಜಯಪುರ ಮಹಾನಗರ ಪಾಲಿಕೆ, ವಾಹನ ಚಾಲಕರ ಮತ್ತು ನಿರ್ವಾಹಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯದ ಮುಖ್ಯಮಂತ್ರಿಗಳಿಗೆ ಬುಧವಾರ ಮನವಿ ಸಲ್ಲಿಸಲಾಯಿತು.

ಈ ಸಂದರ್ಭ ಕಾರ್ಮಿಕರ ಸಂಘದ ಪ್ರಮುಖರು ಮಾತನಾಡಿ, ರಾಜ್ಯ ಸರ್ಕಾರವು ಮುನಿಸಿಪಾಲಿಟಿಗಳಲ್ಲಿ ದುಡಿಯುವ ಎಲ್ಲಾ ಗುತ್ತಿಗೆ, ಹೊರ ಗುತ್ತಿಗೆ ಆಧಾರಿತ ಪೌರಕಾರ್ಮಿಕರು, ನೀರು ಸರಬರಾಜು ವಿಭಾಗದ ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಲೋಡರ್, ಕಸದ ವಾಹನ ಚಾಲಕರು, ಸಹಾಯಕರು ಹಾಗೂ ಪೌರಕಾರ್ಮಿಕರು, ಪಾರ್ಕ, ಸ್ಮಶಾನ, ಶೌಚಾಲಯಗಳಲ್ಲಿ ಘನ ತ್ಯಾಜ್ಯ ಘಟಕ, ಯು.ಜಿ.ಡಿ. ನೀರು ಸಂಸ್ಕರಣಾ ಘಟಕದ ಕಾರ್ಮಿಕರು, ಮೇಲ್ವಿಚಾರಕರು ಎಂಬ ಅಸಂಬದ್ಧ ವಿಗಂಡಣೆಯನ್ನು ಕೈಬಿಟ್ಟು, ಎಲ್ಲಾ ಸ್ವಚ್ಛತಾ ಕಾರ್ಮಿಕರನ್ನು ವಾಹನ ಚಾಲಕರ ಸೇವೆಗಳನ್ನು ಈ ತಕ್ಷಣದಿಂದ ನೇರ ಪಾವತಿಯಡಿಯಲ್ಲಿ ತಂದು ಸಮಾನ ವೇತನ ನೀಡಬೇಕು. ನಂತರದಲ್ಲಿ ಹಂತ ಹಂತವಾಗಿ ಖಾಯಂಗೊಳಿಸಲು ರಾಜ್ಯ ಸರ್ಕಾರ 2024 ರ ಬಜೆಟ್‌ನಲ್ಲಿ ಕ್ರಮವಹಿಸಬೇಕೆಂದು ಆಗ್ರಹಿಸಿದರು.



ಬಳಿಕ ಕಾರ್ಮಿಕರಿಗೆ ಸಿಗಬೇಕಾದ ಹಕ್ಕೊತ್ತಾಯಗಳು, ಬೇಡಿಕೆಗಳನ್ನೊಳಗೊಂಡ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಹೋರಾಟಗಾರರಾದ ಭೀಮಸಿ ಚಲವಾದಿ, ಅಧ್ಯಕ್ಷ ಶಂಕರ ಹು.ಚಲವಾದಿ, ಉಪಾಧ್ಯಕ್ಷ ಹುಸನಪ್ಪ ಚಲವಾದಿ, ದಲಿತ ಮುಖಂಡರಾದ ಸಂಜು ಕಂಬಾಗಿ, ಖಜಾಂಚಿ, ಮೋಸಿನಖಾನ ಆಲಮೇಲ, ಕಾರ್ಯದರ್ಶಿ ಪ್ರವೀಣ ಕಳ್ಳಿಮನಿ, ಸಂಚಾಲಕ ಅಲ್ಲಾರ ಅತ್ತಾರ, ತನ್ವೀರ ಘುಲಫರೋಶ, ರುಕ್ಮೋದ್ದೀನ ಹೊನವಾಡ, ಬಸವರಜ ಕಾಂಬಳೆ, ಸತೀಶ ಚಲವಾದಿ, ಮಂಜು ಕಂಡರೆ, ವಿಜಯ ಮೇತ್ರಿ, ಶಿವಾಜಿ ಜಾಧವ, ರವಿ, ರಮೇಶ ರಾಠೋಡ, ಅನೀಲ ಆಲಕುಂಟೆ, ಗಂಗಾಧರ ಶಾಪೂರ, ಹುಸೇನ ಮುಲ್ಲಾ, ಸೈಯದ ಜಾಗೀರದಾರ, ಸುರೇಶ ಕನ್ನೂರ ಇನ್ನಿತರರು ಉಪಸ್ಥಿತರಿದ್ದರು.

# ನವೋದಯ ವಿದ್ಯಾಲಯಕ್ಕೆ ಡಿಸಿ ಟಿ.ಭೂಬಾಲನ್ ಭೇಟಿ



**ಉದಯರಶ್ಮಿ ನ್ಯೂಸ್**

ವಿಜಯಪುರ: ಆಲಮಟ್ಟಿಯ ಜವಾಹರ ನವೋದಯ ವಿದ್ಯಾಲಯಕ್ಕೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಬುಧವಾರ ಭೇಟಿ ನೀಡಿ ಶೈಕ್ಷಣಿಕ ಗುಣಮಟ್ಟ, ಅಲ್ಲಿನ ಸ್ಥಿತಿಗತಿಗಳ ಕುರಿತು ಪರಿಶೀಲನೆ ನಡೆಸಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಗತ್ಯ ಸೂಚನೆಗಳನ್ನು ನೀಡಿದರು.

ವಿದ್ಯಾಲಯದ ಸಲಹಾ ಸಮಿತಿ ಸಭೆ ನಡೆಸಿದ ಅವರು, ವಿದ್ಯಾಲಯದ ಬೋಧನಾ ಗುಣಮಟ್ಟವನ್ನು ಹೆಚ್ಚಿಸಿ ಫಲಿತಾಂಶ ಹೆಚ್ಚಳಕ್ಕೆ ಕ್ರಮ ವಹಿಸಬೇಕು. ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ಬೆಳವಣಿಗೆ ದೃಷ್ಟಿಯಿಂದ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಿ, ಮಕ್ಕಳ ಕೌಶಲ್ಯತೆಯನ್ನು ಹೆಚ್ಚಿಸಲು ಕ್ರಿಯಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಸಾಮಾಜಿಕ ಸೇವೆಯಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಲು ಎನ್.ಸಿ.ಸಿ. ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಮೂಲಕ ಪ್ರೇರೆಪಿಸಬೇಕು. ವಿದ್ಯಾಲಯಕ್ಕೆ ಅಗತ್ಯವಿರುವ ಜನರೇಟರ್, ಸೋಲಾರ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದ ಅವರು, ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಗಾರ್ಡನ್ ಹಾಗೂ ಆಟದ ಮೈದಾನ ಅಭಿವೃದ್ಧಿಪಡಿಸುವಂತೆ ಅವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ವಿ.ಶಾಂತಿ, ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

### ಶಾಸಕರಿಂದ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ಕಾಮಗಾರಿ ವೀಕ್ಷಣೆ

# ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ :ಯಶವಂತ್ರಾಯಗೌಡ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಪಟ್ಟಣಕ್ಕೆ ಸಮೀಪದ ಕೃಷ್ಣಾ ನದಿ ದಂಡೆಯಲ್ಲಿ ನಿರ್ಮಾಣವಾಗುತ್ತಿರುವ ಹೊರ್ತಿ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ ಜಾಕ್‌ವೆಲ್ ಕಾಮಗಾರಿಯನ್ನು ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ಸ್ಥಳಕ್ಕೆ ಆಗಮಿಸಿ ಬುಧವಾರ ವೀಕ್ಷಣೆ ಮಾಡಿದರು.

ಸರಕಾರಿ ಸ್ವಾಮಿತ್ವದ ಕೃಷ್ಣಾ ಭಾಗ್ಯ ಜಲನಿಗಮದ ಅಡಿಯಲ್ಲಿ ಸುಮಾರು ಎಪ್ಪತ್ತು ಸಾವಿರ ಎಕರೆ ಭೂಮಿಗಳಿಗೆ ನೀರಾವರಿ ಸೌಲಭ್ಯವನ್ನು ದೊರಕಿಸಿಕೊಡಲು ಕೈಗೊಂಡಿರುವ ಮಹತ್ವಾಕಾಂಕ್ಷೆಯ ಹೊರ್ತಿ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯು ಇದಾಗಿದ್ದು ಈಗಾಗಲೇ ಪ್ರಾರಂಭಿಸಿರುವ ಜಾಕ್‌ವೆಲ್ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸ್ಥಳದಲ್ಲಿಯೇ ಸೂಚನೆ ಕೊಟ್ಟರು.

ಅಖಂಡ ಇಂಡಿ ತಾಲೂಕಿನ ರೈತರ ಬಹುದಿನದ ಕನಸಾಗಿರುವ ಈ ನೀರಾವರಿ ಯೋಜನೆಯ ಕಾಮಗಾರಿಗಳನ್ನು ಗುತ್ತಿಗೆದಾರರು ಗುಣಮಟ್ಟದ ರೀತಿಯಲ್ಲಿ ಕೈಗೊಳ್ಳಲು ಅಧಿಕಾರಿಗಳು ಖುದ್ದಾಗಿ ಪರಿಶೀಲನೆ ಮಾಡಿ ಬಯಲುಸೀಮೆ ಪ್ರದೇಶವಾಗಿರುವ ಇಂಡಿ, ಚಡಚಣ, ನಾಗಠಾಣ, ಭಾಗದ ರೈತರ ಜಮೀನುಗಳಿಗೆ ನೀರು ಹರಿದು ನೀರಾವರಿ ಕ್ಷೇತ್ರವಾಗಿ ಮಾರ್ಪಡಬೇಕು ಎನ್ನುವುದೇ ನನ್ನ ಕನಸಾಗಿದೆ ಎಂದ ಅವರು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಸಮಗ್ರ ಮಾಹಿತಿ ಪಡೆದುಕೊಂಡರು.

ಕೆಬಿಜೆಎನ್ಎಲ್ ಮುಖ್ಯ ಅಭಿಯಂತರ ಎಚ್.ಎನ್.ಶ್ರೀನಿವಾಸ, ಸುಪರಿಟೆಂಡೆಂಟ್ ಇಂಜಿನಿಯರ ಗೋವಿಂದ ರಾಠೋಡ, ಸೇರಿದಂತೆ ವಿವಿಧ ಇಲಾಖೆಯ ಎಲ್ಲ ಅಧಿಕಾರಿ ವರ್ಗದವರು ಶಾಸಕರೊಂದಿಗೆ ಜಾಕ್‌ವೆಲ್ ಕಾಮಗಾರಿ ಪರಿಶೀಲಿಸಿ ವಿವರಣೆ ನೀಡಿದರು.



# ಮಹಿಳೆಗೆ ಸಮಾನ ಅವಕಾಶ ನೀಡಿ :ಸಾಲಹಳ್ಳಿ



**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಇಂದಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಅವರಿಗೆ ಸಮಾನ ಅವಕಾಶ ನೀಡುವದರ ಜೊತೆಗೆ ಪ್ರತಿಯೊಬ್ಬ ಹೆಣ್ಣುಮಗು ಶಿಕ್ಷಣವಂತಳಾಗಿ ಬದುಕಲು ಅವಕಾಶ ಮಾಡಿಕೊಡುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು ಎಂದು ಸಾಹಿತಿ ಶಿಕ್ಷಕ ಜಗದೀಶ ಸಾಲಹಳ್ಳಿ ಹೇಳಿದರು.

ತಾಲೂಕಿನ ಮಸೂತಿ ಗ್ರಾಮದಲ್ಲಿರುವ ಗುರು ಸಂಗನಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಹಮ್ಮಿಕೊಂಡ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳು ಸಮಾಜದಲ್ಲಿ ಅನುಭವಿಸುತ್ತಿರುವ ಗೃಹ ಹಿಂಸೆ, ಭೇಧ ಭಾವ, ಬಾಲ್ಯ ವಿವಾಹ ಪದ್ದತಿಗೆ ಅನುವಾಗುವದರ ಮೂಲಕ ಹಲವಾರು ಜ್ವಲಂತ ಸಮಸ್ಯೆಗಳ ಸುಳಿಗೆ ಸಿಲುಕುವ ಹೆಣ್ಣಿನ ಶೋಷಣೆಯ ಕುರಿತು ಜಾಗೃತೆ ಮೂಡಿಸಬೇಕೆಂದು ಕರೆ ಕೊಟ್ಟರು.

ಶಿಕ್ಷಕಿ ಎಚ್.ಎಸ್.ತಳವಾರ ಮಾತನಾಡಿ, ಸಮಾಜದಲ್ಲಿ ಬದುಕುತ್ತಿರುವ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯದ ಜೊತೆಗೆ ಅವಕಾಶಗಳು ಸಿಕ್ಕರೆ ಮಹಿಳೆ ಎಲ್ಲ ರಂಗ ಕ್ಷೇತ್ರಗಳಲ್ಲಿಯೂ ಕೂಡ ಸಾಧನೆ ಮಾಡಬಲ್ಲಳು ಎನ್ನುವುದನ್ನು ಈಗಾಗಲೇ ಸಾಧಿಸಿ ತೋರಿಸಿದ್ದಾರೆ. ಆದರೂ ಕೂಡ ಕೆಲವು ಕಡೆ ತಾರತಮ್ಯ ಅಸುರಕ್ಷತೆ ಇರುವುದು ಕಂಡು ಬಂದಿದ್ದು ಅದನ್ನು ಹೋಗಲಾಡಿಸಲು ಪ್ರತಯತ್ನಿಸಬೇಕು ಎಂದರು.

ಮಹಿಳೆಯರ ಕುರಿತು ಜಾಗೃತಿ ಮೂಡಿಸುವ ಕಿರು ನಾಟಕದ ಪ್ರದರ್ಶನ, ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರ ಕುರಿತು ಛದ್ಮವೇಷಗಳಲ್ಲಿ ತೋರಿಸಿಕೊಟ್ಟರು.

ಈ ಸಂದರ್ಭದಲ್ಲಿ ಎಮ್.ಎಚ್.ನಾಯಕ, ಎಸ.ಎಸ.ದಂಗಲ, ಪ್ರವೀಣ ಪಾಟೀಲ, ಎಸ್.ಐ.ಅಮರಖೇಡ, ನೀಲಮ್ಮ ಹಿರೇಮಠ ಉಪಸ್ಥಿತರಿದ್ದರು.

# ಸಂಸ್ಕೃತಿಕ ನಾಯಕ ಬಸವಣ್ಣ :ಸ್ನೇಹಲತಾ ಹರ್ಷ



**ಉದಯರಶ್ಮಿ ನ್ಯೂಸ್**

ವಿಜಯಪುರ: 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪನೆ ಮಾಡಿ ವರ್ಗರಹಿತ ವರ್ಣರಹಿತ ಲಿಂಗ ಸಮಾನತೆ ಬೋಧಿಸಿ ಸಮ ಸಮಾಜವನ್ನು ಕಟ್ಟಿದವರು ಬಸವಣ್ಣನವರು. ಹೀಗಾಗಿ ಅಂದಿನ ಅನುಭವ ಮಂಟಪದ ಅನುರೂಪವೇ ಇಂದಿನ ಪಾರ್ಲಿಮೆಂಟು ಅಥವಾ ಸಂಸತ್ತು ಪ್ರಜಾಪ್ರಭುತ್ವದ ನೆಲೆಯಲ್ಲಿ ಸಂವಿಧಾನಿಕ ಚಿಂತನೆಗಳ ಮೂಲಕ ಮೇಲು ಕೀಳು ಅಸ್ಪೃಶ್ಯ ಎಂಬ ಭಾವನೆಯನ್ನು ಹೋಗಲಾಡಿಸಿ, ಎಲ್ಲರನ್ನು ಅಪ್ಪಿಕೊಂಡು ಒಪ್ಪಿಕೊಂಡು ಎಲ್ಲರ ಬಾಳಿಗೆ ಬೆಳಕಾದ ಬಸವಣ್ಣನವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಸಚಿವ ಸಂಪುಟದ ಸಹೋದ್ಯೋಗಿಗಳು ಕರ್ನಾಟಕದ ಸಂಸ್ಕೃತಿಕ ನಾಯಕರೆಂದು ಘೋಷಣೆ ಮಾಡಿದ್ದಕ್ಕಾಗಿ ತುಂಬ ಹರ್ಷವಾಗಿದೆ ಎಂದು ಕಾಂಗ್ರೆಸ್ಸಿನ ರಾಜ್ಯ ಮಹಿಳಾ ಕಾರ್ಯದರ್ಶಿ ಸ್ನೇಹಲತಾ ಶೆಟ್ಟಿ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

# ಓಸಿ ಮಟಗಾ: ಮೂವರ ಮೇಲೆ ಪ್ರಕರಣ ದಾಖಲು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲೂಕಿನ ಢವಳಗಿ ಗ್ರಾಮದ ಬಸ್‌ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ ಓಸಿ ಮಟಗಾ ಆಡುತ್ತಿದ್ದ ಮೂರು ಜನರ ಮೇಲೆ ಇಲ್ಲಿನ ಪಿಎಸ್‌ಐ ಸಂಜೀವ ತಿಪರೆಡ್ಡಿ ಕರ್ನಾಟಕ ಪೊಲೀಸ್ ಕಾಯ್ದೆ ಪ್ರಕಾರ ಪ್ರಕರಣ ದಾಖಲಿಸಿದ್ದಾರೆ.

ಆರೋಪಿತರಾದ ಬಸವರಾಜ ಕೋರಿ, ದಾವಲಭಾಷ್ಯಾ ಹಳ್ಳೂರ, ಲಾಳೇಸಾಬ ನಬಿಸಾಬ ಪಿಂಜಾರ ಇವರಿಂದ ಓ.ಸಿ ನಂಬರ ಬರೆದ ಚೀಟಿ, ಒಂದು ಬಾಲ್ ಪೆನ್ನು ಸಮೇತ ಕೆಲ ಹಣವನ್ನು ವಶಪಡಿಸಿಕೊಳ್ಳಲಾಗಿದೆ.

# ಜ.29ರಂದು ಗೋಳಸಾರದಲ್ಲಿ ಸಾಮೂಹಿಕ ವಿವಾಹ



**ಉದಯರಶ್ಮಿ ನ್ಯೂಸ್**


ಇಂಡಿ: ಶ್ರೀ ಸದ್ಗುರು ಚಿನ್ಮಯಮೂರ್ತಿ ಮಹಾಶಿವಯೋಗಿಗಳ 30 ನೇ ಪುಣ್ಯಾರಾಧನೆ ನಿಮಿತ್ಯ ಗೋಳಸಾರದ ಶ್ರೀ ಪುಂಡಲಿಂಗೇಶ್ವರ ಮಹಾಶಿವಯೋಗಿಗಳ ಮಠದಲ್ಲಿ ಜ. 29 ರಂದು ಸಾಮೂಹಿಕ ವಿವಾಹ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಜ.25 ರಿಂದ 29 ರ ವರೆಗೆ ಪ್ರತಿದಿನ ಮುಂಜಾನೆ 6 ಗಂಟೆಯಿಂದ ಶ್ರೀ ಸದ್ಗುರು ಚಿನ್ಮಯಮೂರ್ತಿ ತ್ರಿಮೂರ್ತಿ ಮಹಾಶಿವಯೋಗಿಗಳ ಗದ್ದುಗೆಗೆ ರುದ್ರಾಭಿಷೇಕ, ಪುಷ್ಪಾರ್ಚನೆ, ಪ್ರತಿದಿನ ಸಾಯಂಕಾಲ 6 ಗಂಟೆಯಿಂದ ಆದ್ಯಾತ್ಮ ಪ್ರವಚನ ಜರುಗುವದು.

ಜ.25 ರಂದು ಬೆಳಗ್ಗೆ 9 ಗಂಟೆಗೆ ಡೊಳ್ಳಿನ ಗಾಯನ ಸ್ಪರ್ಧೆ ವಿವಿಧ ಗ್ರಾಮದ ಡೊಳ್ಳಿನ ಕಲಾವಿದರಿಂದ, 26 ರಂದು ರಾತ್ರಿ 7 ಗಂಟೆಗೆ ಜತೆಗಿರುವನು ಚಂದಿರ ನಾಟಕ ಶಿವಸಂಚಾರ ಕಲಾಬಳಗ ಸಾಣೆಹಳ್ಳಿ ಇವರಿಂದ, 27 ರಂದು ಬೆಳಗ್ಗೆ ಡಾ॥ ಮಂಜುನಾಥ ಕೊಟೆನ್ನವರ ಇವರ ನೇತೃತ್ವದಲ್ಲಿ ಬಿಎಲ್‌ಡಿಈ ಆಸ್ಪತ್ರೆಯ ವಿವಿಧ ತಜ್ಞರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಲಿದೆ. ನಂತರ ರಾತ್ರಿ 7 ಗಂಟೆಗೆ ತಾಳಿಯ ತಕರಾರು ನಾಟಕ, 28 ರಂದು ರಾತ್ರಿ 7 ಗಂಟೆಗೆ ಕಲ್ಯಾಣದ ಬಾಗಿಲು ನಾಟಕ, ಜ. 29 ರಂದು ಸೋಮವಾರ ಮುಂಜಾನೆ ಸುಮಂಗಲೆಯರ ಕುಂಭದೊಂದಿಗೆ ಶ್ರೀ ಪ್ರಭು ಸಿದ್ಧರಾಯ ದೇವರ ಪಲ್ಲಕ್ಕಿ ಉತ್ಸವ ನಂತರ 11 ಗಂಟೆಗೆ ನಾಡಿನ ಶರಣರಿಂದ ಹಿತೋಪದೇಶ ಹಾಗೂ ಸಾಮೂಹಿಕ ವಿವಾಹ ನಡೆಯಲಿದೆ. ಸಾಮೂಹಿಕ ವಿವಾಹಕ್ಕಾಗಿ 9482630441,9901658866 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ಕೋರಿದ್ದಾರೆ.

# ನಮ್ಮೆಲ್ಲರ ಎದೆಯ ದನಿಯೇ ನಮ್ಮ ಸಂವಿಧಾನ

## (Our constitution is the voice of all of us)






**ಉದಯರಶ್ಮಿ ದಿನಪತ್ರಿಕೆ**

1945ರಲ್ಲಿ ದ್ವಿತೀಯ ಮಹಾಯುದ್ಧವು ಕೊನೆಗೊಂಡ ನಂತರ ಭಾರತದಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಳ್ಳುವ ಪ್ರಶ್ನೆ ಬಹು ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಸ್ವಾತಂತ್ರ್ಯವನ್ನು ಹಸ್ತಾಂತ-ರಿಸಲು ಬ್ರಿಟೀಷ ಸರಕಾರ ತನ್ನ



– ಮನು ಪತ್ತಾರ, ಕಲಕೇರಿ

ಮಂತ್ರಿಗಳಿಂದ ಕೂಡಿದ ತ್ರಿ-ಸದಸ್ಯರ ಕ್ಯಾಬಿನೆಟ್ ಆಯೋಗವನ್ನು ಭಾರತಕ್ಕೆ ಕಳುಹಿಸಿಕೊಟ್ಟಿತ್ತು. ಅದು ಇಲ್ಲಿಯ ಪರಿಸ್ಥಿತಿಯ ಅಧ್ಯಯನ ನಡೆಸಿ 1946 ಮಾರ್ಚ 16ರಂದು ತನ್ನ ವರದಿಯನ್ನು ಮಂಡಿಸುತ್ತದೆ. ಭಾರತವು ತನ್ನ ಸುಗಮ ಆಡಳಿತದ ನಿರ್ವಹಣೆಗಾಗಿ ಒಂದು ಸಂವಿಧಾನವನ್ನು ರಚಿಸಲು ರಾಜ್ಯಾಂಗ ಸಭೆಯನ್ನು ರಚಿಸಿಕೊಳ್ಳಬೇಕೆಂದು ಆಯೋಗವು ಶಿಫಾರಸ್ಸು ಮಾಡುತ್ತದೆ. ಈ ಶಿಫಾರಸ್ಸಿನಂತೆ ರಾಜ್ಯಾಂಗ ರಚನಾ ಸಭೆಗೆ ಸದಸ್ಯರ ಆಯ್ಕೆಗೆ ಚುನಾವಣೆಗಳು ನಡೆಯುತ್ತವೆ. ಪ್ರಾಂತೀಯ ವಿಧಾನಸಭೆಗಳು ಈ ಚುನಾವಣೆ ನಡೆಸಿ ಸದಸ್ಯರನ್ನು ಆಯ್ಕೆ ಮಾಡಿ, ರಾಜ್ಯಾಂಗ ಸಭೆಗೆ ಕಳುಹಿಸಿಕೊಡುತ್ತವೆ.

ಡಾ. ಬಿ. ಆರ್. ಅಂಬೇಡ್ಕರ್ ಅವರು ಬಂಗಾಳ ವಿಧಾನಸಭೆಯಿಂದ ಆಯ್ಕೆಗೊಂಡು ಸಂವಿಧಾನ ರಚನಾ ಸಭಗೆ ಪ್ರವೇಶಿಸುತ್ತಾರೆ. ಸ್ವತಂತ್ರ ಭಾರತದ ಸಂವಿಧಾನ ರಚಿಸಲು ರಾಜ್ಯಾಂಗ ಸಭೆಯು 1946 ಡಿಸೆಂಬರ್ 9ರಂದು ಆರಂಭಗೊಳ್ಳುತ್ತದೆ. 296 ಸದಸ್ಯರ ಪೈಕಿ 207 ಸದಸ್ಯರು ಪ್ರಥಮ ಅಧಿವೇಶನ ಸಭೆಯಲ್ಲಿ ಹಾಜರಾಗುತ್ತಾರೆ. ಎರಡು ದಿನಗಳ ನಂತರ ಅಂದರೆ 1946 ಡಿಸೆಂಬರ್ 11ರಂದು ಡಾ. ರಾಜೇಂದ್ರ ಪ್ರಸಾದ್ ಅವರನ್ನು ರಾಜ್ಯಾಂಗ ರಚನಾ ಸಭೆಯ ಖಾಯಂ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುತ್ತದೆ.

1946ರ ಡಿಸೆಂಬರ್ 13ರಂದು ಜವಾಹರಲಾಲ್ ನೆಹರು ಅವರು ರಾಜ್ಯಾಂಗ ಸಭೆಯ ಧ್ಯೇಯೋದ್ದೇಶಗಳನ್ನು ಕುರಿತು ನಿರ್ಣಯವನ್ನು ಮಂಡಿಸುತ್ತಾರೆ. ಡಿಸೆಂಬರ್ 17ರಂದು ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅವರು ಅನಿರೀಕ್ಷಿತವಾಗಿ ಡಾ. ಅಂಬೇಡ್ಕರ್ ಅವರನ್ನು ತಮ್ಮ ಅಭಿಪ್ರಾಯವನ್ನು ಹೇಳಬೇಕೆಂದು ಆಹ್ವಾನಿಸುತ್ತಾರೆ. ಸಂವಿಧಾನದ ಧ್ಯೇಯೋದ್ದೇಶಗಳ ಕುರಿತಂತೆ ಅತ್ಯಂತ ಸ್ಪಷ್ಟವಾಗಿ ಮಾತನಾಡಿದ ಡಾ. ಬಿ. ಆರ್. ಅಂಬೇಡ್ಕರ್ ಅವರ ಮಾತುಗಳನ್ನು ಕೇಳಿದ ಸದಸ್ಯರೆಲ್ಲರೂ ಹರ್ಷೋದ್ಗಾರ ವ್ಯಕ್ತಪಡಿಸಿ ಜೋರಾದ ಚಪ್ಪಾಳೆ ತಟ್ಟಿ ಸ್ವಾಗತಿಸುತ್ತಾರೆ. ಅವರ ಈ ಭಾಷಣ ಭವಿಷ್ಯದ ಭಾರತಕ್ಕೆ ರಾಜ್ಯಮಾರ್ಗ ತೋರಿದಂತಿತ್ತು ಹಾಗೂ ಡಾ. ಅಂಬೇಡ್ಕರ್ ಅವರು ಇಲ್ಲದೇ ಸಂವಿಧಾನ ರಚನೆ ಅಸಾಧ್ಯ ಅನ್ನುವ ಮಟ್ಟಿಗೆ ಅಧ್ಯಕ್ಷ ಹಾಗೂ ಸದಸ್ಯರ ಮೇಲೆ ಪರಿಣಾಮ ಬೀರಿತು. ಹೀಗೆ, ಅಂದು ಅಂಬೇಡ್ಕರರು ಯಾರ ಮೇಲೂ ಹರಿಹಾಯದೆ ರಾಜಕೀಯ ಮುತ್ಸದ್ದಿತನದ ಮಾತುಗಳನ್ನಾಡಿ ಎಲ್ಲರ ಮೆಚ್ಚುಗೆಯನ್ನು ಪಡೆದುಕೊಳ್ಳುತ್ತಾರೆ.


1947 ಜನವರಿ 24ರಂದು ಸದನವು ಒಂದು ನಿರ್ಣಯ ಕೈಗೊಂಡು ಸರ್ದಾರ ಪಟೇಲ್‌ರ ಅಧ್ಯಕ್ಷತೆಯಲ್ಲಿ ಐವತ್ತು ಜನ ಸದಸ್ಯರನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗುತ್ತದೆ. ಡಾ. ಅಂಬೇಡ್ಕರರು ಸಲಹಾ ಸಮಿತಿಯ ಒಬ್ಬ ಸದಸ್ಯರಾಗಿರುತ್ತಾರೆ. ಸಲಹಾ ಸಮಿತಿಯು ನಾಲ್ಕು ಉಪಸಮಿತಿಗಳನ್ನು ನೇಮಿಸುತ್ತದೆ. ಒಂದನೆಯದ್ದು, ಮೂಲಭೂತಹಕ್ಕುಗಳ ಉಪಸಮಿತಿ, ಎರಡನೆಯದ್ದು ಅಲ್ಪ ಸಂಖ್ಯಾತರ ಉಪಸಮಿತಿ. ಮೂರನೆಯದ್ದು ಈಶಾನ್ಯ ಗಡಿಯ ಆದಿವಾಸಿ ಪ್ರದೇಶಗಳ ಉಪಸಮಿತಿ, ನಾಲ್ಕನೆಯದ್ದು ಪ್ರತ್ಯೇಕವಾದ ಮತ್ತು ಭಾಗಶಃ ಪ್ರತ್ಯೇಕವಾದ ಪ್ರದೇಶಗಳ ಉಪಸಮಿತಿ. ಡಾ. ಅಂಬೇಡ್ಕರರವರು ಮೊದಲ ಎರಡು ಉಪಸಮಿತಿಗಳ ಸದಸ್ಯರಾಗಿರುತ್ತಾರೆ. ಈ ಸಮಿತಿಗಳು ನಡೆಸಿದ ಚರ್ಚೆಗಳಲ್ಲಿ ಭಾಗವಹಿಸಿ ಗಾಢವಾದ ಆಸಕ್ತಿಯನ್ನು ತೋ-ರಿಸುತ್ತಾರೆ. ತಮ್ಮ ಮನಸ್ಸಿನಲ್ಲಿದ್ದ ವಿಚಾರಗಳಿಗೆ ಗಟ್ಟಿಯಾದ ರೂಪವನ್ನು ಕೊಟ್ಟು ಮೂಲ ಹಕ್ಕುಗಳ ಸಮಿತಿಗೆ ಟಿಪ್ಪಣಿಯನ್ನು ಕೊಡುತ್ತಾರೆ.

1947 ಎಪ್ರೀಲ್ 30ರಂದು ಸಂವಿಧಾನ ಸಭೆಯು ಮತ್ತೆ ಮೂರು ಸಮಿತಿಗಳನ್ನು ರಚಿಸುತ್ತದೆ. 1.ಕೇಂದ್ರ ಅಧಿಕಾರ ಸಮಿತಿ 2. ಕೇಂದ್ರ ಸಂವಿಧಾನ ಸಮಿತಿ 3. ತಾತ್ಕಾಲಿಕ ಸಂವಿಧಾನ ಸಮಿತಿ. ಡಾ. ಅಂಬೇಡ್ಕರ್ ಅವರು ಕೇಂದ್ರ ಸಂವಿಧಾನ ಸಮಿತಿಯ ಸದಸ್ಯರಾಗುತ್ತಾರೆ. ಹೀಗಾಗಿ, ಬಹುತೇಕ ಎಲ್ಲಾ ಪ್ರಮುಖ ಸಮಿತಿಗಳಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರು ಸ್ಥಾನವನ್ನು ಪಡೆದಿದ್ದು ಅವರ ವಿದ್ವತ್ತಿಗೆ ಸಾಕ್ಷಿಯಾಗಿದೆ. ಅಂಬೇಡ್ಕರ ಅವರು ಬಂಗಾಳದಿಂದ ಆಯ್ಕೆಯಾಗಿ ಸಂವಿಧಾನ ರಚನಾ ಸಭೆಗೆ ಬಂದಿರುತ್ತಾರೆ. ಆದರೆ ಬಂಗಾಳ ವಿಭಜನೆಯಿಂದ ಸ್ವಾತಂತ್ರ್ಯ ನಂತರ ಅವರ ಸದಸ್ಯತ್ವ ರದ್ದಾಗಿ ಅವರು ಸಂವಿಧಾನ ರಚನಾ ಸಭೆಯಿಂದ ಹೊರಗುಳಿಯುವ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ಡಾ. ಅಂಬೇಡ್ಕರ್ ಅವರ ಸೇವೆ ಇಲ್ಲದೆ ಶಾಸನ ರಚನಾ ಕಾರ್ಯ ಸುಲಭವಲ್ಲ ಎಂಬುದನ್ನು ಅರಿತ ಕಾಂಗ್ರೆಸ್ 1947ರ ಜುಲೈ 30ರಲ್ಲಿ ಮುಂಬಯಿಯಿಂದ ಸಂವಿಧಾನ ಸಭೆಯ ಸದಸ್ಯರಾಗಿ ಆಯ್ಕೆಯಾಗಿ ಬರಲು ಸಂಪೂರ್ಣ ಸಹಕಾರ ನೀಡಿ ಅವರನ್ನು ಆಯ್ಕೆ ಮಾಡುತ್ತದೆ.

1947 ಅಗಸ್ಟ್ 15ರಂದು ಭಾರತವು



ಬ್ರಿಟೀಷ್ ಆಡಳಿತದಿಂದ ಮುಕ್ತವಾಗಿ ಸ್ವಾತಂತ್ರ್ಯಗೊಳ್ಳುತ್ತದೆ. ಪಂಡಿತ ಜವಾಹರಲಾಲ ನೆಹರೂರವರು ಸ್ವತಂತ್ರ ಭಾರತದ ಮೊದಲ ಪ್ರಧಾನ ಮಂತ್ರಿಗಳಾಗುತ್ತಾರೆ. ನೆಹರೂರವರು ತಮ್ಮ ಸಚಿವ ಸಂಪುಟಕ್ಕೆ ಸೇರಬೇಕೆಂದು ಅಂಬೇಡ್ಕರ್‌ರರನ್ನು ಆಹ್ವಾನಿಸುತ್ತಾರೆ. ಆಹ್ವಾನವನ್ನು ಅಂಗೀಕರಿಸಿ ಡಾ. ಅಂಬೇಡ್ಕರರು ಭಾರತದ ಮೊದಲನೆಯ ಕಾನೂನು ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸುತ್ತಾರೆ.



1947 ಅಗಸ್ಟ್ 29ರಂದು ಅಸೆಂಬ್ಲಿಯು ಅವರನ್ನು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುತ್ತದೆ. ಕರಡು ರಚನಾ ಸಮಿತಿಗೆ 1. ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ 2. ಎನ್. ಗೋಪಾಲಸ್ವಾಮಿ ಅಯ್ಯಂಗಾರ್ 3. ಕೆ.ಎಂ. ಮುನ್ಸಿ 4. ಸೈಯದ್ ಮಹಮದ್ ಸಾದುಲ್ಲಾ 5. ಸರ್ ಬಿ. ಎಲ್. ಮಿಟ್ಟರ್ 6. ಡಿ.ಪಿ. ಖೈತಾನ್‌ರವರುಗಳನ್ನು ಸದಸ್ಯರನ್ನಾಗಿ ನೇಮಿಸಲಾಗುತ್ತದೆ. ಸಂವಿಧಾನ ಕರಡನ್ನು ತಯಾ-ರಿಸುವ ಕೆಲಸವನ್ನು ಈ ಸಮಿತಿಗೆ ಒಪ್ಪಿಸಿದ್ದರಿಂದ ಸಂವಿಧಾನ ರಚನೆಯ ಹೊರೆ ಅಂಬೇಡ್ಕರ್ ಅವರ ಮೇಲೆ ಬೀಳುತ್ತದೆ.

1947 ಅಗಸ್ಟ್ 30ರಂದು ಕರಡು ರಚನಾ ಸಮಿತಿಯು ತನ್ನ ಮೊದಲ ಸಭೆಯನ್ನು ನಡೆಸುತ್ತದೆ. ಸಮಿತಿಯು ನಂತರದಲ್ಲಿ 1947 ಅಕ್ಟೋಬರ್ 27ರಿಂದ 1948 ಫೆಬ್ರುವರಿ 13ರವರೆಗೆ ನಿರಂತರವಾಗಿ 44 ದಿನಗಳ ಕಾಲ ಸಭೆ ನಡೆಸಿ, ಸಂವಿಧಾನ ಸಲಹಾಕಾರರ ಕಛೇರಿಯು ಸಿದ್ದಪಡಿಸಿದ ಕರಡಿನ ಅನುಚ್ಛೇದಗಳನ್ನು ಒಂದೊಂದಾಗಿ ಚರ್ಚಿಸಿ, ಪರಿಷ್ಕರಿಸುತ್ತದೆ. ಡಾ. ಅಂಬೇಡ್ಕರ್ ಅವರೇ ಈ ಎಲ್ಲಾ ಸಭೆಗಳ ಕಲಾಪಗಳನ್ನು ನಿರ್ವಹಿಸುತ್ತಾರೆ. ಕರಡು ರಚನಾ ಸಮಿತಿಯು ಅಂತಿಮವಾಗಿ ಅಂಗೀಕರಿಸಿದ ರೂಪದಲ್ಲಿ ಸಂವಿಧಾನದ ಹೊಸ ಕರಡನ್ನು ಅಸೆಂಬ್ಲಿಯ ಅಧ್ಯಕ್ಷ-ರಿಗೆ 1948 ಫೆಬ್ರುವರಿ 21ರಂದು ಒಪ್ಪಿಸುತ್ತದೆ.

ಡಾ. ಅಂಬೇಡ್ಕರ್ ಅವರು ಸಂವಿಧಾನ ಸಭೆಗೆ ಕರಡು ಸಂವಿಧಾನವನ್ನು ಪರಿಶೀಲನೆಗಾಗಿ 1948ರ ನವೆಂಬರ್ 4ರಂದು ಮಂಡನೆ ಮಾಡುತ್ತಾರೆ. ಇದೇ ಸಂದರ್ಭದಲ್ಲಿ ಅಸೆಂಬ್ಲಿಯಲ್ಲಿ ಅಂಬೇಡ್ಕರ್ ಅವರು 'ಕರಡು ಸಂವಿಧಾನವನ್ನು ಎಂಟು ತಿಂಗಳ ಕಾಲ ಜನತೆಯ ಮುಂದಿ-ರಿಸಲಾಗಿತ್ತು. ಈ ಎಂಟು ತಿಂಗಳ ಕಾಲಾವಧಿಯಲ್ಲಿ ಕರಡು ಸಂವಿಧಾನದ ವಿರುದ್ಧವಾಗಿ ಬಂದಿರುವ ವಿರೋಧಿ ಟೀಕೆಗಳನ್ನು ವ್ಯವಹರಿಸಿದ್ದೇನೆ ಮತ್ತು ಅತ್ಯಂತ ಮುಖ್ಯವಾದ ಟೀಕೆಗಳನ್ನು ನಾನು ಕೈಬಿಟ್ಟಿಲ್ಲ. ಯಾವ ಸಂವಿಧಾನವೂ ಪರಿಪೂರ್ಣವಲ್ಲ. ಕರಡು ರಚನಾ ಸಮಿತಿಯು ಸಿದ್ಧಪಡಿಸಿರುವ ಈ ಸಂವಿಧಾನವು ಈ ದೇಶದಲ್ಲಿ ಪ್ರಾರಂಭಕ್ಕೆ ಸಾಕಷ್ಟು ಉತ್ತಮವಾಗಿದೆ ಎಂದು ಧೈರ್ಯವಾಗಿ ಹೇಳುತ್ತಿದ್ದೇನೆ. ಸಂವಿಧಾನವು ನವ್ಯವಾಗಿದೆ, ಶಾಂತಿ-ಕಾಲ-ಯುದ್ಧಕಾಲಗಳೆರಡರಲ್ಲೂ ದೇಶವನ್ನು ಒಂದಾಗಿ ಹಿಡಿದಿರಲು ತಕ್ಕಷ್ಟು ಬಲವಾಗಿದೆ. ನೂತನ ಸಂವಿಧಾನದ ಪ್ರಕಾರ ಏನಾದರೂ ಹಾನಿಯುಂಟಾದರೆ ಅದಕ್ಕೆ ಕಾರಣ ನಮ್ಮಲ್ಲಿ ಕೆಟ್ಟದಾದ ಸಂವಿಧಾನವಿರುವುದಿಲ್ಲ. ಮನುಷ್ಯನು ಕೆಟ್ಟವನಾಗಿದ್ದನು ಎಂದು ಹೇಳಬೇಕಾಗುತ್ತದೆ' ಹೇಳಿ ಅಂಬೇಡ್ಕರರು ಸಂವಿಧಾನದ ಮೇಲಿನ ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾರೆ. ನಂತರ ಸಂವಿಧಾನ ಸಭೆಯ ಸದಸ್ಯರುಗಳಲ್ಲಿ ಒಬ್ಬರಾದ ಶ್ರೀ ಟಿ.ಟಿ. ಕೃಷ್ಣಮಾಚಾರಿ ಅವರು ಮಾತನಾಡುತ್ತಾ ಸದನದಲ್ಲಿ ಡಾ. ಅಂಬೇಡ್ಕರ್ ಅವರ ಭಾಷಣವನ್ನು ಗಮನವಿಟ್ಟು ಕೇಳಿದವರಲ್ಲಿ ನಾನೂ ಒಬ್ಬ. ಈ ಸಂವಿಧಾನದ ಕರಡು ತಯಾರಿಸುವುದರಲ್ಲಿ ಅವರು ಪಟ್ಟಿರುವ ಶ್ರಮ ಉತ್ಸಾಹ ಇವುಗಳ ಅರಿವು ನನಗಿದೆ, ಮಾನ್ಯ ಅಧ್ಯಕ್ಷರೆ ನೀವು ನೇಮಿಸಿದ ಏಳು ಜನ ಸದಸ್ಯರಲ್ಲಿ ಒಬ್ಬರು ಸದನಕ್ಕೆ ರಾಜೀನಾಮೆ ಕೊಟ್ಟರು, ಒಬ್ಬರು ಮೃತರಾದರು, ಒಬ್ಬರು ಅಮೇರಿಕಕ್ಕೆ ಹೋದರು, ಇನ್ನೊಬ್ಬ ವ್ಯಕ್ತಿ ಸರಕಾರದ ಕೆಲಸದಲ್ಲಿ ತೊಡಗಿದ್ದರು, ಒಬ್ಬಿಬ್ಬರು ದೆಹಲಿಯಿಂದ ಬಹುದೂರದಲ್ಲಿದ್ದರು, ಆದ್ದರಿಂದ ಅಂತಿಮವಾಗಿ ಈ ಸಂವಿಧಾನದ ಕರಡು ಸಿದ್ಧಪಡಿಸುವ ಕೆಲಸವು ಡಾ. ಅಂಬೇಡ್ಕರ್ ಅವರ ಮೇಲೆ ಬಿದ್ದಿತು. ನಿಸ್ಸಂದೇಹವಾಗಿ ಪ್ರಶಂಸಾರ್ಹವಾದ ರೀತಿಯಲ್ಲಿ ಈ ಕೆಲಸವನ್ನು ನಿರ್ವಹಿಸಿರುವುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ ಎಂದು ಹೇಳಿದರು.

ಇನ್ನೋರ್ವ ಸದಸ್ಯರಾದ ಶ್ರೀ ಖಾಜೀ ಸೈಯದ್ ಕ-ರೀಮುದ್ದೀನ್ ಅವರು 'ಭಾರತದ ಕರಡು ಸಂವಿಧಾನದ ಪರಿಶೀಲನೆಗೆ ಸೂಚನೆಯನ್ನು ಮಂಡಿಸಿರುವುದಕ್ಕಾಗಿ ಡಾ. ಅಂಬೇಡ್ಕರ್ ಅವರನ್ನು ನಾನು ಅಭಿನಂದಿಸುತ್ತೇನೆ.' ಎಂದರು ಸಂವಿಧಾನದ ಸಭೆಯಲ್ಲಿ ಈ ಮಹನೀಯರ ಸದಸ್ಯರಿಬ್ಬರ ಮಾತುಗಳನ್ನು ನೋಡಿದಾಗ ಸಂವಿಧಾನ ರಚನೆಯ ಸಂಪೂರ್ಣ ಜವಾಬ್ದಾರಿ ಡಾ. ಬಾಬಾಸಾಹೇಬ ಅಂಬೇಡ್ಕರರ ಮೇಲೆ ಬಿದ್ದಿರುವುದು ಸ್ಪಷ್ಟವಾಗುತ್ತದೆ. ಜಾತಿ-ಮತ, ಭಾಷೆಯ ಭೇದಗಳೆನ್ನದೆ ಗಂಡು-ಹೆಣ್ಣು ಬಡವ-ಬಲ್ಲಿದನೆಂಬ ತಾರತಮ್ಯವಿಲ್ಲದೆ ಪ್ರತಿಯೊಬ್ಬರಿಗೂ ನ್ಯಾಯ, ಸ್ವಾತಂತ್ರ್ಯ ಸಮಾನತೆ ಮತ್ತು ಸೋದರತ್ವಗಳೊಂದಿಗೆ ಮುನ್ನಡೆಯುವ ಮಾರ್ಗ ಹಾಕಿ ಕೊಟ್ಟು ದೇಶಪ್ರೇಮ ಮತ್ತು ಮಾನವ ಪ್ರೇಮಗಳೊಂದಿಗೆ ಕಲ್ಯಾಣ ರಾಷ್ಟ್ರಕ್ಕಾಗಿ ಪ್ರಜಾಪ್ರಭುತ್ವದ ತಳಹದಿಯನ್ನು ಹಾಕಿಕೊಟ್ಟ ಮಹಾ ಮಾನವತಾವಾದಿ ಮಹಾ ಮೇಧಾವಿ ಬಾಬಾ ಸಾಹೇಬರು ದೇಶದ ಸರ್ವಶ್ರೇಷ್ಠ ಮಹಾನಾಯಕರಾಗಿದ್ದಾರೆ.

ಸಂವಿಧಾನದ ದ್ವಿತೀಯ ವಚನವು 1948 ನವೆಂಬರ್ 15ರಿಂದ ಪ್ರಾರಂಭವಾಗಿ 1949 ಅಕ್ಟೋಬರ್ 17ರವರೆಗೆ ಸಂವಿಧಾನದ ಒಂದೊಂದು ಒಳಪ್ರಕರಣಗಳ ವಿವರವಾದ ಚರ್ಚೆ

> ನಾಳೆ
> **ಗಣರಾಜ್ಯೋತ್ಸವ**
> ಸಂಭ್ರಮ, ತನ್ನಿಮಿತ್ತ ಈ ವಿಶೇಷ ಲೇಖನ

ನಡೆಯುತ್ತದೆ. ಅಂತಿಮವಾಗಿ ಸಂವಿಧಾನ ಸಭೆಯು 1949 ನವೆಂಬರ್ 17ರಂದು ಬೆಳಿಗ್ಗೆ 10 ಗಂಟೆಗೆ ಡಾ. ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತದೆ. ಸಭಾಧ್ಯಕ್ಷರು ಮೂರನೆಯ ಸುತ್ತಿನ ಪಠಣವನ್ನು ಆರಂಭಿಸುತ್ತಾರೆ. ಅನೇಕ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಂಡು ಮಾತುಗಳನ್ನಾಡಿದ ನಂತರ ಡಾ. ಅಂಬೇಡ್ಕರರು ಕೊನೆಗೆ ತಮ್ಮ ಅಮೋಘವಾದ ಭಾಷಣವನ್ನು ಪ್ರಾರಂಭಿಸುತ್ತಾರೆ.

ಸಂವಿಧಾನ ಸಭೆಯ ಕಾರ್ಯವನ್ನು ಒಮ್ಮೆ ಅವಲೋಕಿಸಿದಾಗ ಅದು 1946 ಡಿಸೆಂಬರ್ 9ರಂದು ಪ್ರಥಮ ಬಾರಿಗೆ ಸಮಾವೇಶಗೊಂಡು ಎರಡು ವರ್ಷ ಹನ್ನೊಂದು ತಿಂಗಳು ಹದಿನೇಳು ದಿನಗಳು ಪೂರ್ಣಗೊಂಡಿವೆ. ಈ ಕಾಲಾವಧಿಯಲ್ಲಿ ಸಂವಿಧಾನ ಸಭೆಯು ಒಟ್ಟು 11 ಸಭೆಗಳನ್ನು ನಡೆಸಿದೆ. ಸಭೆಗೆ 165 ದಿನಗಳನ್ನು ಪರಿಶೀಲನೆಗೆ 114 ದಿನಗಳನ್ನು ತೆಗೆದುಕೊಳ್ಳಬೇಕಾಯಿತೆಂದು ಅಂಬೇಡ್ಕರರು ಕರಡು ಸಮಿತಿಯ ಕಾರ್ಯನಿರ್ವಹಿಸಿದ ರೀತಿಯನ್ನು ವಿವರಿಸುವರು. ಕರಡು ರಚನಾ ಸಮಿತಿಯನ್ನು 1947 ಅಗಸ್ಟ್ 29ರಂದು ಸಂವಿಧಾನ ಸಭೆಯು ಚುನಾಯಿಸುತ್ತದೆ. ಅದು ಅಗಸ್ಟ್ 30ರಂದು ತನ್ನ ಮೊದಲ ಸಭೆ ಸೇರಿ ಸಂವಿಧಾನವನ್ನು ರಚಿಸಲು 141 ದಿನಗಳನ್ನು ತೆಗೆದುಕೊಂಡು ಅಂತಿಮವಾಗಿ ಸಂವಿಧಾನವು ರೂಪುಗೊಳ್ಳುವ ಹೊತ್ತಿಗೆ 395 ವಿಧಿಗಳೂ, 8 ಅನುಸೂಚಿಗಳು ಅದರಲ್ಲಿ ಒಳಗೊಂಡಿವೆ. ಕರಡು ಸಂವಿಧಾನದ ರಚನಾ ಅವಧಿಯಲ್ಲಿ 7635 ತಿದ್ದುಪಡಿಗಳು ದಾಖಲಾಗುತ್ತವೆ. ಅವುಗಳನ್ನು ಪರಿಶೀಲಿಸಿ ಮಹತ್ವದ 2473 ತಿದ್ದುಪಡಿಗಳನ್ನು ವಾಸ್ತವವಾಗಿ ಸದನದ ಮುಂದೆ ಚರ್ಚೆಗೆ ತರಲಾಯಿತು.

ಡಾ. ಬಿ.ಆರ್. ಅಂಬೇಡ್ಕರ್ ಅವರು 60 ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿದ ಅತ್ಯಂತ ಶ್ರೇಷ್ಠ ಸಂವಿಧಾನಿಕ ತಜ್ಞರಾಗಿದ್ದಾರೆ. ಭಾರತದ ಸಂವಿಧಾನದ ಪಿತಾಮಹರೆಂದು, ಸಂವಿಧಾನದ ಶಿಲ್ಪಿ ಎಂದು ಅವರನ್ನು ಗೌರವಿಸಲಾಗುತ್ತಿದೆ 26 ನವೆಂಬರ್ 1949ರಂದು ಭಾರತದ ಸಂವಿಧಾನ ಪೂರ್ಣಗೊಂಡು 1950 ಜನೇವರಿ 26ನೇ ದಿನದಿಂದ ಜಾರಿಗೆ ಬಂದಿತು. ಅಂದಿನಿಂದ ಜನವರಿ 26ನ್ನು ಗಣರಾಜ್ಯೋತ್ಸವ ದಿನವಾಗಿ ಆಚರಿಸಲಾಗುತ್ತಿದೆ.

ಸಾಮಾಜಿಕ ಮತ್ತು ಆರ್ಥಿಕ ಧ್ಯೆಯಗಳನ್ನು ಈಡೇರಿಸಿಕೊಳ್ಳಲು ಜನರು ಸಂವಿಧಾನಿಕ ವಿಧಾನಗಳನ್ನು ಅನುಸರಿಸಬೇಕು. ಕಾಯ್ದೆ ಭಂಗ, ಅಸಹಕಾರ, ಮತ್ತು ರಕ್ತಪಾತದಂತಹ ಮಾರ್ಗಗಳನ್ನು ಸಂಪೂರ್ಣವಾಗಿ ತೊರೆಯಬೇಕು. ಆರ್ಥಿಕ ಮತ್ತು ಸಾಮಾಜಿಕ ಆಶೋತ್ತರಗಳ ಈಡೇರಿಕೆಗೆ ಸಂವಿಧಾನ ಸಮ್ಮತವಾದ ಕಾನೂನಿನ ಮಾರ್ಗಗಳನ್ನು ಅನುಸರಿಸಬೇಕು. ಆಗ ಮಾತ್ರ ಪ್ರಜಾಪ್ರಭುತ್ವದ ಸ್ವರೂಪವನ್ನು ಅದರ ತತ್ವ ಸಿದ್ಧಾಂತವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಂವಿಧಾನದ ಮೂಲಕ ಡಾ. ಬಿ. ಆರ್. ಅಂಬೇಡ್ಕರ್ ಅವರು ಭಾರತದ ಭವಿಷ್ಯತ್ತಿನ ಮಾರ್ಗವನ್ನು ತೋರಿಸಿದ್ದಾರೆ. ಈ ಮಾರ್ಗದಲ್ಲಿ ನಾವೆಲ್ಲ ಮುನ್ನಡೆಯುವುದು ಆದ್ಯ ಕರ್ತವ್ಯವಾಗಿದೆ, ನಮ್ಮ ಭವಿಷ್ಯವಿದೆ, ರಾಷ್ಟ್ರಭಕ್ತಿ ಅಡಗಿದೆ. ಒಂದು ವೇಳೆ ಇದನ್ನು ಮರೆತರೆ ಅಥವಾ ಅಲಕ್ಷ್ಯ ಧೋರಣೆ ತೋ-ರಿದರೆ ನಾವುಗಳು ಸಮಾನತೆ, ಸ್ವಾತಂತ್ರ್ಯ, ಸಹೋದರತೆಗಳನ್ನು ಕಳೆದುಕೊಂಡು ಮತ್ತೊಮ್ಮೆ ಗುಲಾಮಗಿರಿ ಸಂಕೋಲೆಯಲ್ಲಿ ಸಿಕ್ಕು ಹಾಕಿಕೊಳ್ಳಬೇಕಾಗುವುದು ಎಂಬ ಈ ಎಚ್ಚರಿಕೆಯನ್ನು ನಮ್ಮೊಳಗೆ ಯಾವತ್ತೂ ಜಾಗ್ರತವಾಗಿಟ್ಟುಕೊಂಡು ಮಂದೆ ಸಾಗುವ ಜರೂರು ಕಂಡು ಬರುತ್ತಿದೆ

**(ಕೃಪೆ: ಸೋಮಲಿಂಗ ಗೆಣ್ಣೂರು ಅವರ ಅಂಬೇಡ್ಕರ್ ಮಾರ್ಗ)**

# ಜೋಡೆತ್ತು ಬಂಡಿಗಳ ನಂದಿ ಯಾತ್ರೆಗೆ ಸ್ವಾಗತ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ಪಟ್ಟಣದಲ್ಲಿ ಎತ್ತುಗಳ ಹಾಗೂ ಮಣ್ಣಿನ ಮಹತ್ವ ಸಾರುವ ಉದ್ದೇಶದಿಂದ ಗುರುವಿಗಾಗಿ ನಡೆ ನಮನ ಸಂದೇಶದೊಂದಿಗೆ ಬಿಜ್ಜರಗಿಯಿಂದ ಆರಂಭವಾದ ಜೋಡೆತ್ತು ಬಂಡಿಗಳ ನಂದಿ ಯಾತ್ರೆಗೆ ಸೋಮವಾರ ಸ್ವಾಗತ ಕೋರಲಾಯಿತು.

ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಪಟ್ಟಣದ ವಿರಕ್ತಮಠದಿಂದ ರೈತರು ಜೋಡೆತ್ತು ಬಂಡಿಗಳಲ್ಲಿ ಬಸವೇಶ್ವರ, ಶಿವಯೋಗಿ ಶಿವಲಿಂಗೇಶ್ವರರ ಮೂರ್ತಿ ಹಾಗೂ ಸಿದ್ಧೇಶ್ವರ ಸ್ವಾಮೀಜಿ ಅವರ ಭಾವಚಿತ್ರದ ಮೆರವಣಿಗೆ ಮೂಲಕ ವಿಜಯಪುರ ರಸ್ತೆಯಲ್ಲಿನ ಬಸವ ಭವನ ಮುಂಭಾಗಕ್ಕೆ ಆಗಮಿಸಿದರು. ಬಿಜ್ಜರಗಿಯ ರೈತರು ತಾಲೂಕಿನ ನಂದಿಹಾಳ ಪಿ.ಯು ಗ್ರಾಮದಿಂದ 9 ಜೋಡೆತ್ತು ಬಂಡಿಗಳೊಂದಿಗೆ ಆಗಮಿಸಿದ ನಂದಿ ಯಾತ್ರೆಗೆ ಸ್ವಾಗತ ಕೋರಲಾಯಿತು.

ನಂದಿ ಯಾತ್ರೆಯ ನೇತೃತ್ವ ವಹಿಸಿರುವ ವಿಜಯಪುರದ ಅಭಿ ಫೌಂಡೇಷನ್ ಮುಖ್ಯಸ್ಥ ಬಸವರಾಜ ಬಿರಾದಾರ ಮಾತನಾಡಿ, ಜ್ಞಾನಯೋಗಿ ಸಿದ್ದೇಶ್ವರ ಶ್ರೀಗಳು ಎತ್ತುಗಳನ್ನು ಸಂರಕ್ಷಿಸಲು ಆಧ್ಯಾತ್ಮಿಕ ಸ್ಥಳಗಳಿಗೆ ನಂದಿ ಯಾತ್ರೆ ಕೈಗೊಳ್ಳಬೇಕೆಂಬ ಆಶಯ ಹೊರ ಹಾಕಿದ್ದರು. ಎತ್ತು ಹಾಗೂ ಮಣ್ಣಿನ ಮಹತ್ವದ ಕು-ರಿತು ಜಾಗೃತಿ ಮೂಡಿಸುವುದಕ್ಕಾಗಿ ಬಿಜ್ಜರಗಿಯ ಸಿದ್ಧೇಶ್ವರ ರೈತಮಿತ್ರ ಸ್ವಯಂ ಸೇವಕರ ಸಂಘದ ನೇತೃತ್ವದಲ್ಲಿ ಜೋಡೆತ್ತು ಬಂಡಿಗಳ ಮೂಲಕ ನಂದಿ ಯಾತ್ರೆ ಆರಂಭಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯ ಪ್ರಮುಖ 40 ಆಧ್ಯಾತ್ಮಿಕ ಕೇಂದ್ರಗಳಲ್ಲಿ ಸಂಘಗಳನ್ನು ಸ್ಥಾಪಿಸಲಾಗುವುದು. ಬಸವನಬಾಗೇವಾಡಿ ಪಟ್ಟಣ ಸೇ-ರಿದಂತೆ ತಾಲೂಕಿನ ಮನಗೂಳಿ, ಯರನಾಳ, ನಂದಿಹಾಳ ಪಿ.ಯು, ಇಂಗಳೇಶ್ವರ ಗ್ರಾಮಗಳಲ್ಲಿ ಸಂಘ ರಚನೆ ಮಾಡಲಾಗಿದೆ ಎಂದು ಹೇಳಿದರು.

ಯಾತ್ರೆಯ ಪ್ರಮುಖ ಬಸವರಾಜ ಕೋನರೆಡ್ಡಿ ಮಾತನಾಡಿ, ಎತ್ತುಗಳು ಉಳಿದರೆ ಭಾರತೀಯ ಕೃಷಿ ಪದ್ಧತಿ ಉಳಿಯುತ್ತದೆ. ಪಶುಗಳ ಸಾಕಾಣಿಕೆಗೆ ರೈತರಿಗೆ ಸಹಾಯಧನ ನೀಡುವ ಅಗತ್ಯತೆ ಇದೆ. ಇಂದಿನ ಆಹಾರ ಕಲಬೆರಕೆಯಿಂದ ಕೂಡಿದೆ. ದನಕರುಗಳ ಸಾಕಾಣಿಕೆಗೆ ಹೆಚ್ಚಿನ ಮಹತ್ವ ನೀಡಿ ಸಾವಯವ ಕೃಷಿ ಪದ್ದತಿಗೆ ಉತ್ತೇಜನ ನೀಡಬೇಕಿದೆ ಎಂದು ಹೇಳಿದರು.

ಯಾತ್ರೆಯ ಸಂದರ್ಭದಲ್ಲಿ ಬಸವರಾಜ ಹಾರಿವಾಳ, ಶ್ರೀಶೈಲ ಉಟಗಿ, ಶಿವಾನಂದ ಬಿರಾದಾರ, ಪ್ರಭಾಕರ ಖೇಡದ, ಮಲ್ಲಪ್ಪ ಕುಂಬಾರ, ಬಸವರಾಜ ಸಂಗಮ, ಸಿರಸಪ್ಪ ಉಟಗಿ ಭೀಮು ಪೋಳ, ಶಿವಾನಂದ ತೊಳನೂರ, ಹನಮಂತ ಕನಮಡಿ, ಕೆ.ಎಸ್.ಅವಟಿ, ನಿಂಗಪ್ಪ ಸಿಗ್ಗಾವಿ ಇತರರು ಇದ್ದರು.

# ಸಮಾಜದ ಮೌಲ್ಯ ಹೆಚ್ಚಿಸುವ ದತ್ತಿ ಗೋಷ್ಠಿಗಳು :ಬಿದನೂರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಗೋಷ್ಠಿಗಳಿಂದ ಸಮಾಜದ ಮೌಲ್ಯ ಹೆಚ್ಚಿಸುತ್ತವೆ.

ಆರೋಗ್ಯಯುತ ಸಮಾಜ ನಿರ್ಮಾಣ ಮಾಡುವಲ್ಲಿ ಸಾಹಿತ್ಯ ಪರಿಷತ್ತು ನಿರಂತರ ಶ್ರಮಿಸುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಸಹಕಾರಿ ಧುರೀಣ ರಮೇಶ ಬಿದನೂರ ಅಭಿಪ್ರಾಯ ವ್ಯಕ್ತಪಡಿಸಿದರು.

ಬುಧವಾರ ಜಿಲ್ಲಾ , ತಾಲೂಕ ಹಾಗು ನಗರ ಘಟಕ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ಸಂಯುಕ್ತ ಆಶ್ರಯದಲ್ಲಿ ಸಾಹಿತ್ಯ ಸಭಾಂಗಣದಲ್ಲಿ ಜರುಗಿದ ದಿ ಶಂಕರಾನಂದ ಕಾಳಪ್ಪ ಉತ್ಲಾಸರ ದತ್ತಿ ದಾನಿಗಳು ಶ್ರೀದೇವಿ ಉತ್ಲಾಸರ. ವಿಷಯ ನಾಟ್ಯ, ಸಂಗೀತ, ಮತ್ತು ಸಾಹಿತ್ಯ ಕುರಿತು .ಮತ್ತು ಶ್ರೀಮತಿ ನಿಂಗಮ್ಮ ಗುರಪ್ಪ ಯಾದವಾಡ (ಬೋಳಶೆಟ್ಟಿ)

ದತ್ತು ದಾನಿಗಳು ಮಲ್ಲಪ್ಪ ಗುರಪ್ಪ ಯಾದವಾಡ (ಬೋಳಶೆಟ್ಟಿ )

ವಿಷಯ: ಶ್ರೀ ರಾಘವೇಂದ್ರ ಶ್ರೀಗಳು ಹಾಗು ಅಲ್ಲಮಪ್ರಭು ದೇವರ ಕುರಿತು ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಅಥ9ಪೂಣ9ವಾದ ಕಾರ್ಯಕ್ರಮಗಳ ಮೂಲಕ ಪರಿಷತ್ತು ಉಪಯುಕ್ತವಾದ ಚಟುವಟಿಕೆಗಳನ್ನು ಆಯೋಜಿಸುತ್ತಿರುವದು ಹೆಮ್ಮೆಯ ಸಂಗತಿ ಎಂದರು.



ಸಾಹಿತಿ ಡಾ: ಮಾಧವರಾವ ಗುಡಿ ಅವರು ಶ್ರೀ ರಾಘವೇಂದ್ರ ಶ್ರೀಗಳು ಹಾಗು ಅಲ್ಲಮಪ್ರಭು ದೇವರ ಕುರಿತು ಉಪನ್ಯಾಸ ನೀಡಿದರು.

ಶರಣ ಚಿಂತಕ ಮೋಹನ ಕಟ್ಟಿಮನಿ ಅವರು, ನಾಟ್ಯ, ಸಂಗೀತ, ಮತ್ತು ಸಾಹಿತ್ಯಕ್ಕೆ ವಿಜಯಪುರದ ಕೊಡುಗೆ ವಿಷಯದ ಕುರಿತು ಉಪನ್ಯಾಸ ನೀಡಿದರು.

ದತ್ತಿ ದಾನಿ ಶ್ರೀದೇವಿ ಉತ್ಲಾಸರ ಮಾತನಾಡಿದರು.

ರಾಜಕೀಯ ಮುಖಂಡ ಜಿ ಎನ್ ದಿನ್ನಿ ಕಾರ್ಯಕ್ರಮ ಉದ್ಘಾಟಿಸಿದರು.

ವಿಜಯಲಕ್ಷ್ಮಿ ಹಳಕಟ್ಟಿ, ಗೀತಾ ಕುಲಕರ್ಣಿ, ರಾಜೇಸಾಬ ಶಿವನಗುತ್ತಿ, ಕಸ್ತೂರಿ ಮಠಪತಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಹಾಸಿಂಪೀರ ವಾಲಿಕಾರ, ಶಿವಾನಂದ ಡೋಣೂರ, ಜಿ ಎಸ್ ಬಳ್ಳೂರ, ವಿದ್ಯಾವತಿ ಅಂಕಲಗಿ, ಆಶಾ ಬಿರಾದಾರ, ಅಜು9ನ ಶಿರೂರ, ಲತಾ ಗುಂಡಿ, ಮಹಾದೇವಿ ತೆಲಗಿ, ಗಂಗಮ್ಮ ರಡ್ಡಿ, ನೀಲಮ್ಮ ಪೂಜಾರಿ, ಮಲ್ಲಮ್ಮ ತಳವಾರ, ಸಾವಿತ್ರಿ ಉಗ್ರಾಣ, ರುಕ್ಮಿಣಿ ಬೆಳ್ಳುಬ್ಬಿ, ಬೊರಮ್ಮ ಮಠಪತಿ, ಅಲ್ತಾಪ ಮದಬಾವಿ, ಎ ಎಲ್ ಹಳ್ಳೂರ ಇದ್ದರು.

ಸುಖದೇವಿ ಅಲಬಾಳಮಠ ಪ್ರಾಥಿ9ಸಿದರು. ಪ್ರಕಾಶ ಗೊಂದಳಿ ಸ್ವಾಗತಿಸಿದರು. ಸುರೇಶ ಜತ್ತಿ ನಿರೂಪಿಸಿದರು. ಸಾಯಬಣ್ಣ ಮಾದರ ವಂದಿಸಿದರು.

# ಮಸಬಿನಾಳ ಪಿಕೆಪಿಎಸ್‌ಗೆ ಅವಿರೋಧ ಆಯ್ಕೆ

**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಮಸಬಿನಾಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಸೋಮವಾರ ಚುನಾವಣೆ ಜರುಗಿತು. ಈ ಎರಡೂ ಸ್ಥಾನಗಳಿಗೆ ತಲಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಎರಡು ಸ್ಥಾನಗಳಿಗೆ ಅವಿರೋಧ ಆಯ್ಕೆ ಆಯಿತು. ಅಧ್ಯಕ್ಷರಾಗಿ ಈರನಗೌಡ .ಎಂ. ಪಾಟೀಲ , ಉಪಾಧ್ಯಕ್ಷರಾಗಿ ಬಾಬು. ವಿ. ನಾಯ್ಕೋಡಿ ವಿರೋಧವಾಗಿ ಆಯ್ಕೆಯಾದರು.

ಸನ್ಮಾನ: ಚುನಾವಣೆ ನಂತರ ಸಿದ್ದರಾಮ ಸ್ವಾಮೀಜಿ ಸಾನಿಧ್ಯದಲ್ಲಿ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ ಸಂಘದ ನೂತನ ನಿರ್ದೇಶಕರಾದ ರವಿ ಬೈಚಬಾಳ, ಸಂತೋಷಕುಮಾರ ಕಾರಜೋಳ, ರಾವುತಪ್ಪ ಡೋಣೂರ, ಶಾಂತಪ್ಪ ಗಾಡದ, ಬಂಡೆಪ್ಪ ನಾಟಿಕರ, ಅಶೋಕ ನಂದ್ಯಾಳ, ಅಶೋಕ ನನಿಕೇರಿ, ಸಿದ್ದಪ್ಪ ಗುತ್ತರ್ಗಿ, ಮಹಿಳಾ ನಿರ್ದೇಶಕರಾದ ಪ್ರಭಾವತಿ ಮಡಗೊಂಡ, ವಿಜಯಲಕ್ಷ್ಮಿ ಡೋಣೂರ, ಗ್ರಾಮದ ಹಿರಿಯರಾದ ದಾನಪ್ಪ ತೋಟದ, ಶೇಖಪ್ಪ ಬೈಚಬಾಳ, ಅಪ್ಪಸಾಹೇಬ ಮಡಗೊಂಡ, ಈರಣ್ಣ ಕೌಲಗಿ, ಶಿವಯ್ಯ ಹಿರೇಮಠ, ರವಿ ಕತ್ನಳ್ಳಿ , ಬಸಲಿಂಗಯ್ಯ ಕೂಡಗಿಮಠ, ಸೋಮಶೇಖರ ಕಾರಜೋಳ, ಪರಮಾನಂದ ತೋಟದ, ಮನಯ್ಯ ತೇರದಾಳ, ಸಮೀರ್ ಸೈಯದ್, ಚುನಾವಣೆ ಅಧಿಕಾರಿ ಎನ್. ಎಂ. ಅವಟಿ ಇತರರು ಇದ್ದರು.

# ಜ.25 ರಂದು ಮತದಾರರ ದಿನಾಚರಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಇಲ್ಲಿನ ಆಲಮಟ್ಟಿ ರಸ್ತೆಯಲ್ಲಿರುವ ಶಾ.ಸೊಗಮಲ್ ಪೀರಾಜಿ ಓಸ್ವಾಲ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜ.25 ರಂದು ಬೆಳಿಗ್ಗೆ 10 ಗಂಟೆಗೆ ಮತದಾರರ ದಿನಾಚರಣೆ ಕುರಿತು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ಆಡಳಿತ, ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಎಲ್ಲ ಸರಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ಲಕ್ಷ್ಮೀ ನಿಂಗಪ್ಪ ಗರಗ ಉದ್ಘಾಟಿಸುವರು. ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಸಂಪತ್ತಕುಮಾರ ಬಳೂಲಗಿಡದ ಉಪಸ್ಥಿತಿಯಲ್ಲಿ ತಹಶೀಲ್ದಾರ ಬಲರಾಮ ಕಟ್ಟಿಮನಿ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ, ಸಹಾಯಕ ಸರಕಾರಿ ಅಭಿಯೋಜಕ ಬಸವರಾಜ ಆಹೇರಿ, ಅಪರ ಸರ್ಕಾರಿ ವಕೀಲ ಎಚ್.ಎಲ್.ಸರೂರ, ಪ್ರಭಾರ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಯುವರಾಜ ಹನಗಂಡಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ ಸಾವಳಗಿ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪ್ರಾಂಶುಪಾಲ ಸಿಕಂದರ ಧನ್ನೂರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಮೂರ್ತಿ ಕುಂಬಾರ ಆಗಮಿಸುವರು. ವಿಜಯಪುರದ ಸ.ಪ್ರ.ದ.ಕಾ ಸಹಾಯಕ ಪ್ರಾಧ್ಯಾಪಕ ಬಿ.ಎಸ್,ಕೊರಬು ವಿಶೇಶ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ವ್ಯಕ್ತಿತ್ವ ವಿಕಸನ ಮಾಲೆ.. 34

# ನೆನಪಿರಲಿ, ಉಪಯೋಗಿಸಿ ಎಸೆಯುವ ಸರಕುಗಳಲ್ಲ ಈ ಸಂಬಂಧಗಳು!



ಈಗಿನ ದಾವಂತದ ಬದುಕಿನಲ್ಲಿ ಸಂಬಂಧಗಳನ್ನು ನಿಭಾಯಿಸುವುದೇ ಒಂದು ದೊಡ್ಡ ತಲೆನೋವಾಗಿ ಬಿಟ್ಟಿದೆ. ಪ್ರತಿ ಸಂಬಂಧಗಳ ನಿಭಾವಣೆಯೂ ಹಗ್ಗದ ಮೇಲೆ ನಡೆದಂತೆನಿಸುತ್ತಿದೆ ಎಂಬುದು ಬಹುತೇಕರ ಅಭಿಪ್ರಾಯ.




ಜಯ್ ನುಡಿ

● ಜಯಶ್ರೀ.ಜೆ.ಅಬ್ಬಿಗೇರಿ

ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ

9449234142


ಮೊದಲೆಲ್ಲ ಸಂಬಂಧಗಳಲ್ಲಿ ಮಧುರತೆಯ ಪರಿಮಳವಿರುತ್ತಿತ್ತು. ನೀನಿಲ್ಲದೇ ನಾನಿಲ್ಲವೆಂಬ ಭಾವ ಎದೆಯ ಬಾಗಿಲಲ್ಲಿ ನೇತಾಡುತ್ತಿತ್ತು. ಸಂಬಂಧ ಯಾವುದೇ ಇರಲಿ ಅದನ್ನು ನಾವು ಸಹನೆಯಿಂದಲೇ ನಿಭಾಯಿಸಬೇಕು. ತಾಳ್ಮೆಯಿಲ್ಲದೇ ಇದ್ದರೆ ನಾವು ಒಬ್ಬರನ್ನು ನೋಯಿಸಿದರೆ ನಮ್ಮನ್ನು ನೋಯಿಸಲು ಮತ್ತೊಬ್ಬರು ಇರುತ್ತಾರೆ. ನಾವು ಯಾವಾಗ ಸಂಬಂಧಗಳನ್ನು ಉಪಯೋಗಿಸಿ ಎಸೆಯುವ ಸರಕುಗಳ ತರಹ ನೋಡಲು ಆರಂಭಿಸಿದೆವೋ ಆಗಿಂದ ಸಿಹಿ ನೀಡುವ ಮಧುರ ಬಂಧಗಳೆಲ್ಲ ಕಹಿ ಅನುಭವಗಳ ಸರಣಿಯನ್ನೇ ಮನ ತುಂಬಿಸ ತೊಡಗಿವೆ. ಈ ಹಿಂದೆ ಗಟ್ಟಿಯಾದ ಬಂಧಗಳು ಇದ್ದವು. ಅವು ಬದುಕಿನ ಒಳಿತಿಗೆ ಮಾತ್ರ ಥಳಕು ಹಾಕಿಕೊಂಡಿದ್ದವು. ಸಂಬಂಧಗಳು ಮನವನ್ನು ಮುದಗೊಳಿಸುತ್ತವೆ. ಬದುಕನ್ನು ಹಸನಾಗಿಸುತ್ತವೆ. ಎಂಬಂಥ ಸಂಗತಿಗಳನ್ನು ನಮ್ಮ ಹಿರಿಯರ ಬದುಕಿನಿಂದ ಕಂಡುಕೊಂಡಾಗಿದೆ. ಹಲವಾರು ಸಂದರ್ಭಗಳಲ್ಲಿ ಕೊಂಡಾಡುವಂತೆಯೂ ಆಗಿದೆ. ಅದಲ್ಲದೇ ಇದು ಸಾವಿರಾರು ವರ್ಷಗಳಿಂದ ಅನೂಚಾನವಾಗಿ ದಾಖಲಾದ ಸಂಗತಿಯೂ ಹೌದು. ಈ ದಿಸೆಯಲ್ಲಿ ಏಕತೆಯ ಸೂತ್ರದಲ್ಲಿ ಬಂಧಿಸುವ ಬಂಧಗಳನ್ನು ಸಾಂಪ್ರದಾಯಿಕ ಪರಿಕರಗಳಂತೆ ಪರಿಗಣಿಸುವುದೇ ಸೂಕ್ತವೆನಿಸುತ್ತದೆ. ಸಂಬಂಧಗಳು ನಾವು ಕಲ್ಪಿಸಿಕೊಳ್ಳಲಾಗದ ವಿಚಿತ್ರ ಸಂಕೀರ್ಣತೆಯನ್ನು ಹೊತ್ತು ತರುತ್ತಿವೆ. ಬನ್ನಿ ಹಾಗಾದರೆ ಅವುಗಳ ನಿಭಾವಣೆ ಹೇಗೆ ಸುಲಭ ಸಾಧ್ಯವಾಗಿಸುವುದು ನೋಡೋಣ.

**ಕೃತಕ ಬಣ್ಣದ ಹೊದಿಕೆ ಹೊದಿಸಬೇಡಿ**

ಈ ನಡುವೆ ವೈಜ್ಞಾನಿಕ ಸೌಲಭ್ಯಗಳಿಗೆ ಎಲ್ಲಿಲ್ಲದ ಮನ್ನಣೆ ನೀಡುತ್ತಿದ್ದೇವೆ. ಇಷ್ಟ ಕಷ್ಟಗಳನ್ನು ತಿಳಿದು ಹೆಜ್ಜೆಯಲ್ಲಿ ಹೆಜ್ಜೆ ಹಾಕುವ ಸಹಜೀವಿಗಳನ್ನು ಕಡೆಗಣಿಸುತ್ತಿದ್ದೇವೆ. ನಮ್ಮೊಂದಿಗೆ ಸಹಬಾಳ್ವೆ ನಡೆಸುವವರನ್ನು ಮನಸೋ ಇಚ್ಛೆ ನಡೆಸಿಕೊಂಡರೆ ಕೆಡುಕು ಕಟ್ಟಿಟ್ಟ ಬುತ್ತಿ. ವಾಸ್ತವದಲ್ಲಿ ಕಹಿಯಾಗಿರುವ ಬಂಧಗಳಿಗೆ ತೋ-ರಿಕೆಯ ಸಲುವಾಗಿ ಕೃತಕ ಬಣ್ಣದ ಹೊದಿಕೆಗಳನ್ನು ಹೊದಿಸುವುದು ಎಷ್ಟು ಸರಿ? ಎಂಬುದನ್ನು ನಾವು ಯೋಚಿಸಲೇಬೇಕಾಗಿದೆ. ಒಂದುಗೂಡಿ ಬದುಕುವುದು ಸರಳ ಸಿದ್ಧಾಂತ. ವೈಯಕ್ತಿಕ ಬೆಳವಣಿಗೆ ಹಾಗೂ ಸ್ವ ಸಂತೋಷಕ್ಕಾಗಿ ಜೀವನವನ್ನು ಶ್ರೀಮಂತಗೊಳಿಸಬಲ್ಲ ಸಾಮರ್ಥ್ಯ ವರ್ಧಿಸಬಲ್ಲ ಬಂಧಗಳನ್ನು ಧಿಕ್ಕ-ರಿಸುವುದು ಎಳ್ಳಷ್ಟೂ ಸರಿಯಲ್ಲ.



ತೀವ್ರಗತಿಯಲ್ಲಿ ಸಾಗುತ್ತಿರುವ ಕಾಲದಲ್ಲಿ ಸಂತಸ ಬದುಕಿನ ಅರಿವಾಗಬೇಕಾದರೆ ಸಂಬಂಧಗಳ ಎಳೆಯನ್ನು ನಾಜೂಕಾಗಿ ಜತನದಿಂದ ಕಾಪಿಟ್ಟುಕೊಳ್ಳಬೇಕು.

**ಬೆಲ್ಲದಂತೆ ಭಾವಿಸಿ**

ಸಂಬಂಧಗಳು ಕಣ್ಣೆದುರಿನ ಕನ್ನಡಿಯಿದ್ದಂತೆ. ನಮ್ಮ ಗುಣ ಸ್ವಭಾವಗಳ ಪ್ರತಿಬಿಂಬ ತೋರುತ್ತವೆ. ನಕ್ಕರೆ ಖಂಡಿತ ನಗುತ್ತವೆ ಆದರೆ ಅತ್ತರೆ ಅಳದೆಯೂ ಇರಬಹುದು. ಕೆಲವೊಮ್ಮೆ ಅಳುವಾಗ ಕಣ್ಣೀರು ಒರೆಸುವ ಕೈ ಬೆರಳುಗಳಾಗಿ ಮನಸ್ಸಿಗೆ ಸಾಂತ್ವನ ನೀಡಬಹುದು. ದಿನಂಪ್ರತಿಯ ಬದುಕು ಹೂವೆತ್ತಿದಂತೆ ಸರಳವೆನಿಸಬೇಕೆಂದರೆ



ಎದುರುಗಿನ ಜೀವಗಳನ್ನು ಹೆಚ್ಚು ಕಹಿಯಿರುವ ಬೇವಿನಂತೆ ಭಾವಿಸಬಾರದು. ಪ್ರತಿಯಾಗಿ ಅಧಿಕ ಸಿಹಿಯಾದ ಬೆಲ್ಲದಂತೆ ಭಾವಿಸಿ, ಬಾಚಿ ತಬ್ಬಿಕೊಳ್ಳಬೇಕು. ಕೆಲವೊಂದು ಬಾರಿ ಕಹಿ ಉಣಿಸುವ ಜೀವಗಳು ಒಳ್ಳೆಯ ಪಾಠಗಳನ್ನು ಜೊತೆಗೆ ಹಿಡಿದು ತಂದಿರುತ್ತವೆ. ಅವುಗಳನ್ನು ಗುರುತಿಸಿ ಕಲಿತರೆ ಜೀವನದಿ ಸರಾಗವಾಗಿ ಹ-ರಿಯುವುದು. ಬಂಧ ಹಳೆಯದಾದಷ್ಟು ಮೌಲ್ಯ ಜಾಸ್ತಿ. ಅದಕ್ಕೆ ಬೆಲೆ ನಿರ್ಧ-ರಿಸುವುದು ಸುಲಭವಲ್ಲ. ಕಳೆದುಕೊಂಡ ಬಂಧ ಮರಳಿ ದೊರೆತರೆ ಆಗುವ ಖುಷಿ ಅಷ್ಟಿಷ್ಟಲ್ಲ. ಹಾಳಾಗದೇ, ಮುಕ್ಕಾಗದೇ ಹಿಂದುರುಗಿದರಂತೂ ಸ್ವರ್ಗವೇ ಕೈಗೆ ಸಿಕ್ಕಂತೆ. ಮುಗ್ಧತೆಯ ಭಾವ ಪ್ರವಾಹದಂತೆ ಉಕ್ಕುತ್ತದೆ. ಬೌದ್ಧಿಕವಾಗಿ ಅದೆಂಥ ತಾಪವಿದ್ದರೂ ಪ್ರೀತಿಯಿಂದಲೇ ಸಹಮತ ವ್ಯಕ್ತಪಡಿಸುತ್ತದೆ ಕಳೆದುಕೊಳ್ಳುವೆನೇನೋ ಎಂಬ ಭೀತಿಯ ದ್ವಾರದ ಇನ್ನೊಂದೆಡೆ ಸಿಹಿ ಕಾಣಿಕೆ ಇರುತ್ತದೆಂಬುದು ನೆನಪಿರಲಿ.

**ನಾನೇ ಶ್ರೇಷ್ಠ ಎನ್ನದಿರಿ**

ಮನಸ್ಸು. ನಡೆಯುವ ದಾ-ರಿಯಲ್ಲಿ ಒಳ್ಳೆಯ ಬಂಧಗಳು ಬೆಸೆದುಬಿಟ್ಟರೆ ಎಲ್ಲಿಲ್ಲದ ಆನಂದ. ಹೆಮ್ಮೆ ತೃಪ್ತಿ ಮೈ ಮನಗಳಲ್ಲಿ ನಲಿದಾಡುತ್ತವೆ. ಹೊಣೆಯರಿತ ಬಂಧಗಳ ಬಲೆ ಹೆಣೆದುಕೊಂಡರೆ ಮಂಗಳ ಮಹೋತ್ಸವ. ಬಂಧಗಳು ಸಡಿಲಗೊಂಡರೆ ಮಾನಸಿಕ ದೌರ್ಬಲ್ಯ ಕಾಡಲಾರಂಭಿಸುತ್ತದೆ ಎಂಬುದು ಈಗ ಬಹುತೇಕ ಜನರ ಬಾಳಲ್ಲಿ ಕಂಡುಂಡ ಅನುಭವ ಸತ್ಯ. ನಾನೇ ಮೇಲು ಎನ್ನುವುದನ್ನು ಬೆಂಬತ್ತಿ ನಡೆಯುವ ಸ್ವಭಾವ ಇಂದು ನಿನ್ನೆಯದಲ್ಲ. ಎಲ್ಲದರಲ್ಲೂ ನಾನೇ ಶ್ರೇಷ್ಠನೆಂದು ಯಜಮಾನಿಕೆ ತೋರುವ ಹಂಬಲವಂತೂ ಇದ್ದೇ ಇದೆ.'ಈವರೆಗೆ ಸಂಬಂಧ ಬಾರದ ಜನ ಒಳ್ಳೆಯವರಾಗೇ ಕಾಣುತ್ತಾರೆ.. ಎಂಬುದು ಅನಾಮಿಕ ಹೇಳಿದ ನುಡಿ. ಸಂಬಂಧಕ್ಕೆ ಸಿಕ್ಕಿದವರಲ್ಲಿ ದೊಷಗಳು ಕಂಡು ಬರುವುದು ಪ್ರತಿಶತ ಸತ್ಯ ಎಂಬುದು ಈ ನುಡಿಯ ಮರ್ಮ. ಪ್ರತಿಯೊಬ್ಬರಲ್ಲೂ ಪ್ರೀತಿ ಕರುಣೆ ನಯ ವಿನಯ ತಾಳ್ಮೆಯಂಥ ಅಪ್ಪಟ ಚಿನ್ನದ ಗುಣಗಳೂ ಇರುತ್ತವೆ ಅದೇ ಕಾಲಕ್ಕೆ ದ್ವೇಷ ಸೇಡಿನಂಥ ವಿನಾಶಕಾರಿ ಗುಣಗಳು ಮನೆ ಮಾಡಿರುತ್ತವೆ. ಅಮೃತದಂಥ ಗುಣಗಳಿಗೆ ಒತ್ತು ನೀಡಲು ಬುದ್ಧಿವಂತಿಕೆಯ ಉಪಾಯ ಬೇಕೇ ಬೇಕು. ತಪ್ಪಿಸಿಕೊಂಡ ಸಂಬಂಧವು ತೀರಿಸದ ಸಾಲದಂತೆ ಎನ್ನುವುದನ್ನು ನೆನಪಿನಲ್ಲಿಡಬೇಕು.

**ರಕ್ಷಣೆಗೆ ಕಾಳಜಿ ವಹಿಸಿ**

ಎಲ್ಲ ಸಂಬಂಧಕ್ಕಿಂತ ರಕ್ತ ಸಂಬಂಧ ಹೆಚ್ಚಿನದು ಎನ್ನುವುದು ಇಂಗ್ಲೀಷ್ ನಾಣ್ಣುಡಿ. ತ್ವರಿತಗತಿಯಲ್ಲಿ ಮುನ್ನುಗ್ಗಬೇಕೆನ್ನುವ ಸ್ಪರ್ಧೆಯ ಮನಗಳಿಗೆ ಸಂಬಂಧಗಳನ್ನು ಎಷ್ಟರ ಮಟ್ಟಿಗೆ ಹೇಗೆ ಬಳಸಿಕೊಳ್ಳಬೇಕೆಂಬ ಜ್ಞಾನವಿದ್ದರೂ ವಾಸ್ತವದಲ್ಲಿ ಎಡುವುವ ಸಂದರ್ಭಗಳೇ ಜಾಸ್ತಿ. ಆಸ್ತಿ ಹಣ ಐಶ್ವರ್ಯ ಅಧಿಕಾರ ಎಷ್ಟೇ ಇದ್ದರೂ ಸಂಬಂಧಗಳು ಸರಿ ಇರದಿದ್ದರೆ ಕಣ್ಣೀರಿನಲ್ಲಿ ಕೈ ತೊಳೆಯುವುದು ಕಟ್ಟಿಟ್ಟ ಬುತ್ತಿ. ಬಂಧಗಳ ಪ್ರೀತಿ ಸೌಹಾರ್ದತೆಯೇ ನಮ್ಮ ಸಹಜ ಗುಣ. ಅದಿಲ್ಲದೇ ಹೋದರೆ ನಾವು ನೀರಿಲ್ಲದ ಮೀನು. ಸಂಬಂಧಗಳ



ನಿರ್ವಹಣೆಯಲ್ಲಿ ಅಜಾಗೂರಕರಾದರೆ ಬಂಧುತ್ವ ಹಳಸುವುದರಲ್ಲಿ ಸಂದೇಹವಿಲ್ಲ. ಬಂಧ ರಹಿತ ಜೀವನ ಚಲಾಯಿಸಬೇಕೆನ್ನುವ ಚಾಲಕನಿಗೆ ಹೆಚ್ಚು ಕಠಿಣ ಎಂಬುದು ಈಗಾಗಲೇ ಸಾಬೀತಾಗಿದೆ. ಸಂಬಂಧಗಳಿಂದ ಅತಿ ಹೆಚ್ಚು ಲಾಭ ಪಡೆಯುವ ಮುತವರ್ಜಿ ತೋರಿಸುತ್ತೆವೆಯೇ ಹೊರತು ಅವುಗಳ ಪೋಷಣೆಗೆ ರಕ್ಷಣೆಗೆ ಕಾಳಜಿ ವಹಿಸುವುದಿಲ್ಲ. ಇದರಿಂದಾಗಿಯೇ ಕೂಡು ಕುಟುಂಬಗಳಲ್ಲಿಯ ಅನೇಕ ಸಂಬಂಧಗಳು ನುಶಿ ಹತ್ತಿ ಹಾಳಾದವು. ಹಿರಿಯರ ಕಾಲದಿಂದ ಅನುಚಾನವಾಗಿ ಬಂದ ಬಂಧಗಳು ಹೆಬ್ಬಂಡೆಯೊಂದಕ್ಕೆ ಡಿಕ್ಕಿ ಹೊಡೆದಂತಾಗಿ ಗಾಯಗೊಂಡಿವೆ. ಘಮ ಚೆಲ್ಲುವ ಮಲ್ಲಿಗೆಯಂಥ ಸುವಾಸಿತ ಸಂಬಂಧಗಳ ಪಕಳೆಗಳನ್ನು ಎಳೆ ಎಳೆಯಾಗಿ ಬಿಚ್ಚದಿದ್ದರೆ ಗೆಲುವು ನನ್ನದು ನಿನ್ನದು ಅಲ್ಲ, ನಮ್ಮೆಲ್ಲರದು.

**ಕೊನೆ ಹನಿ**

ಸೃಷ್ಟಿಯ ಎಲ್ಲ ವಸ್ತುಗಳನ್ನು ಹೇಗೆ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಲಾಭ ನಷ್ಟ ಅವಲಂಬಿಸಿದೆ. ಅದಕ್ಕೆ ಸಂಬಂಧ ಹೊರತಾಗಿಲ್ಲ. ಹಬ್ಬ ಹರಿದಿನಗಳಲ್ಲಿ ಸಭೆ ಸಮಾರಂಭಗಳಲ್ಲಿ ಶುಭ ಗಳಿಗೆಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಬಂಧ ಇನ್ನಷ್ಟು ಬೆಸೆಯಲು, ಮತ್ತಷ್ಟು ವರ್ಧಿಸಲು ಬಲವರ್ಧನೆಗೊಳ್ಳಲು ಹೇಳಿ ಮಾಡಿಸಿದ ಸಮಯ. ಇಂಥ ಪ್ರಸಂಗಗಳಲ್ಲಿ ಸ್ನೇಹಿತ ವರ್ಗದಲ್ಲಿ ಕುಟುಂಬ ಸದಸ್ಯರಲ್ಲಿ ಮನಸ್ಸುಗಳು ಆಹ್ಲಾದತೆಯಿಂದ ಪ್ರಫುಲ್ಲಗೊಂಡಿರುತ್ತವೆ. ಒಳ್ಳೆಯ ಸಂಬಂಧಗಳ ವೃದ್ಧಿಗಾಗಿ ಆಸ್ಥೆ ವಹಿಸುವುದು ನಾವೆಲ್ಲರೂ ಹೊರಬೇಕಾದ ಹೊಣೆ. ನೆಂಟ-ರೊಂದಿಗೆ ಊಟ ಉಪಚಾರ ಮಾಡಬೇಕು. ವ್ಯವಹಾರ ಮಾಡಬಾರದು ಎನ್ನುವ ಉಪಯುಕ್ತ ಮಾತು ಬೆಟಗೇರಿ ಕೃಷ್ಣಶರ್ಮರದು. ವಿಘ್ನ ನಿವಾರಕನ ದೊಡ್ಡ ತಲೆ ನಮ್ಮನ್ನು ವಿಶಾಲವಾಗಿ ಆಲೋಚಿಸಲು ಪ್ರೇರೇಪಿಸುತ್ತದೆ. ಮರದಗಲದ ಕಿವಿಗಳು ಸಹನೆಯಿಂದ ಆಲಿಸಲು ಹೊಸ ಭಾವಗಳಿಗೆ ಕಿವಿಯಾಗಲು ಪರರ ಕಷ್ಟಗಳಿಗೆ ಕರಗಲು ಕಲಿಸುತ್ತವೆ. ಚಿಕ್ಕ ಚಿಕ್ಕ ಕಣ್ಣುಗಳು ಹಿಡಿದ ಕಾರ್ಯವ ಚುರುಕಾಗಿ ಮುಗಿಸಲು ಗಮನ ಅಗತ್ಯವೆಂದು ಹೇಳುತ್ತದೆ. ಉದ್ದನೆಯ ಮೂಗು ಈ ಕಡೆ ಆ ಕಡೆ ಗಮನ ನೀಡಿ ಕುತೂಹಲದಿಂದ ಹೆಚ್ಚು ತಿಳಿಯಲು ಪ್ರಚೋದನೆ ನೀಡುತ್ತದೆ. ಮೂಗು ಕಿವಿ ತಲೆ ದೊಡ್ಡದಾಗಿದ್ದರೂ ಬಾಯಿ ಮಾತ್ರ ಪುಟ್ಟದಾಗಿದೆ. ಇದು ಮಾತು ಕಡಿಮೆ ಇರಲಿ ಎನ್ನುವ ಸಂದೇಶ ನೀಡುತ್ತದೆ. ಮಹಾಗಣಪತಿಯಿಂದ ಸ್ಫೂರ್ತಿ ಪಡೆದು ಆತನ ಅವಯವಗಳ ಸಂದೇಶವನು ಅನುಸರಿಸಿದರೆ ಸಂಬಂಧ ನಿರ್ವಹಣೆ ಸಲೀಸು. ಸಂಬಂಧಗಳ ಹೆಸರಿನಲಿ ನಿಟ್ಟುಸಿರು ಬಿಡುವುದನ್ನು ಬಿಡೋಣ. ಬದುಕಿನ ಬಣ್ಣ ಕರಗುವ ಮುನ್ನ ಸಂಬಧಗಳ ಘಮವನ್ನು ಅಮೂಲ್ಯ ಜೀವನದಲ್ಲಿ ತುಂಬಿ ತುಳುಕಿಸೋಣ.

# ಜ.28 ರಂದು ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ಪ್ರದಾನ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಜ.28 ರಂದು ಸಂಜೆ 5ಗಂಟೆಗೆ ಇಲ್ಲಿನ ವಿಬಿಸಿ ಹೈಸ್ಕೂಲ್ ಹೈಸ್ಕೂಲ್ ಮೈದಾನದಲ್ಲಿರುವ ಶ್ರೀ ಸಿದ್ದೇಶ್ವರ ವೇದಿಕೆಯಲ್ಲಿ ಸ್ವಾಮಿ ವಿವೇಕಾನಂದರ 161ನೇ ಜಯಂತ್ಯೋತ್ಸವದ ಪ್ರಯುಕ್ತ ಸ್ವಾಮಿ ವಿವೇಕಾನಂದ ರಾಷ್ಟ್ರ, ರಾಜ್ಯ ಸದ್ಭಾವನಾ ಪ್ರಶಸ್ತಿ, ಧರ್ಮಯುದ್ಧ ದಿನದರ್ಶಿಕೆ ಲೋಕಾರ್ಪಣೆ ಹಾಗೂ ಸಾಂಸ್ಕೃತಿಕ ಯುವ ವೈಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಪುಂಡಲೀಕ ಮುರಾಳ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಧನಾ ಮಹಿಳಾ ಒಕ್ಕೂಟ ಹಾಗೂ ಧರ್ಮಯುದ್ಧ ದಿನಪತ್ರಿಕೆ ಬಳಗದ ಸಂಯಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮದ ಸಾನಿಧ್ಯವನ್ನು ಸಿದ್ದನಕೊಳ್ಳದ ಶಿವಕುಮಾರ ಮಹಾಸ್ವಾಮಿಗಳು ವಹಿಸಲಿದ್ದು, ಸಚಿವ ಶಿವರಾಜ ತಂಗಡಗಿ ಉದ್ಘಾಟಿಸುವರು. ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯದ ಕುಲಪತಿ ಟಿ.ಎಂ.ಭಾಸ್ಕರ್ ಪ್ರಶಸ್ತಿ ಪ್ರಧಾನ ಮಾಡಲಿದ್ದು, ಶಾಸಕ ಸಿ.ಎಸ್.ನಾಡಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಬಾಜಪಾ ಮುಖಂಡ ಮಹೇಂದ್ರಕುಮಾರ ನಾಯಕ ಮತ್ತು ನೇತಾಜಿ ನಲವಡೆ ದಿನದರ್ಶಿಕೆ ಲೋಕಾರ್ಪಣೆಗೊಳಿಸಲಿದ್ದು, ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಮತ್ತು ದಿ ಕರ್ನಾಟಕ ಕೋ ಆಪ್ ಬ್ಯಾಂಕ್ ಅಧ್ಯಕ್ಷ ಸತೀಶ ಓಸ್ವಾಲ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸಾಂಸ್ಕೃತಿಕ ಯುವ ವೈಭವದ ಉದ್ಘಾಟನೆಯನ್ನು ಅಹಿಲ್ಯಾದೇವಿ ಹೋಳ್ಕರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶೀ ಮಲ್ಲಿಕಾರ್ಜುನ ಮದರಿ ಮತ್ತು ಅಸ್ಕಿ ಫೌಂಡೆಶನ್ ಅಧ್ಯಕ್ಷ, ಸಮಾಜ ಸೇವಕ ಸಿ.ಬಿ ಅಸ್ಕಿ ಉದ್ಘಾಟಿಸಲಿದ್ದಾರೆ. ಒಕ್ಕೂಟದ ರಾಜ್ಯಾಧ್ಯಕ್ಷ ಎಸ್.ಬಾಲಾಜಿ ಆಶಯ ನುಡಿಗಳನ್ನಾಡಲಿದ್ದು, ಬಾಜಪಾ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪ್ರಭುರಾಜ ಕಲ್ಬುರ್ಗಿ, ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ ಸೇ-ರಿದಂತೆ ಮತ್ತೀತರರು ಅತಿಥಿಗಳಾಗಿ ಆಗಮಿಸಲಿರುವದಾಗಿ ತಿಳಿಸಿದರು.

ಈ ವೇಳೆ ತಾಲೂಕಾಧ್ಯಕ್ಷ ಮಹಾಂತೇಶ ಬೂದಿಹಾಳಮಠ, ಉಪಾಧ್ಯಕ್ಷ ಚಂದ್ರಶೇಖರ ಕಲಾಲ ಸದಸ್ಯರಾದ ರಫೀಕ ಶಿರೋಳ, ಕೃಷ್ಣ ಕುಂಬಾರ, ಬಾಪುಗೌಡ ಪಾಟೀಲ, ಶ್ರೀಕಾಂತ ಹಿರೇಮಠ ಸೇರಿದಂತೆ ಮತ್ತೀತರರು ಇದ್ದರು.

# ನೈರ್ಮಲ್ಯತೆ ಕಾಪಾಡಿ ರೋಗ ದೂರವಿಡಿ :ಶ್ರೀಹರಿ

**ಉದಯರಶ್ಮಿ ನ್ಯೂಸ್**

ಸಿಂದಗಿ: ವ್ಯಕ್ತಿಯೊಬ್ಬರಿಗೆ ಕ್ಯೂಲೆಕ್ಸ್ ಎಂಬ ಸೊಳ್ಳೆ ಕಚ್ಚಿದರೆ ಏಕಾಏಕಿ ರೋಗ ಬರುವುದಿಲ್ಲ. ಸೊಳ್ಳೆ ಕಚ್ಚಿದ 5-6ವರ್ಷಗಳ ನಂತರ ಕಾಲು ಬಾವರೇಲೂ ಪ್ರಾರಂಭವಾಗುತ್ತದೆ. ಕೆಲವು ವರ್ಷಗಳಲ್ಲಿ ಕಾಲು ಊದಿಕೊಂಡು ಆನೆ ಕಾಲಿನಂತಾಗುತ್ತದೆ ಎಂದು ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಹರಿ ಕುಲಕರ್ಣಿ ಮಾತನಾಡಿದರು.

ಪಟ್ಟಣದ ಜಿ.ಪಿ.ಪೋರವಾಲ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಅಡಿಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಪ್ರತಿ ವ್ಯಕ್ತಿಗೆ ಮೂರು ಡಿಇಸಿ ಮಾತ್ರೆ ನುಂಗಿಸಿ ರೋಗ ಬರದಂತೆ ಮುಂಜಾಗೃತೆ ವಹಿಸಲಾಗಿದೆ. ಆದರೆ ಪರಿಸರದಲ್ಲಿ ನೈರ್ಮಲ್ಯತೆ ಕಾಪಾಡದಿದ್ದರೆ ರೋಗ ಆವರಿಸುವ ಭೀತಿಯಂತೂ ದೂರವಿಲ್ಲ. ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾತ್ರೆಗಳು ಲಭ್ಯವಿವೆ. ಈವರೆಗೆ ಮಾತ್ರೆ ಸೇವಿಸದವರು ಇಲ್ಲಿ ಮಾತ್ರೆಗಳನ್ನು ಪಡೆಯಬಹುದಾಗಿದೆ. ಆನೆಕಾಲು ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದರೆ ಮಾತ್ರೆಗಳನ್ನು ಸೇವಿಸಬೇಕು. ಜತೆಗೆ ತಮ್ಮ ಮನೆಗಳ ಸುತ್ತಲಿನ ಪರಿಸರದಲ್ಲಿ ಕ್ಯೂಲೆಕ್ಸ್ ಸೊಳ್ಳೆಗಳು ಪಸರಿಸದಂತೆ ಎಚ್ಚರಿಕೆ ವಹಿಸಬೇಕು. ಇದು ಸಾಂಕ್ರಾಮಿಕ ರೋಗವಾದ್ದರಿಂದ ಒಬ್ಬರಿಂದ ಇನ್ನೊಬ್ಬರಿಗೆ ಪಸರಿಸುತ್ತದೆ ಎಂದರು.



ಈ ವೇಳೆ ಪ್ರಾಚಾರ್ಯ ಡಿ. ಎಂ.ಪಾಟೀಲ, ಡಾ. ರವಿ ಲಮಾಣಿ, ವೀರೇಂದ್ರ ಪವಾಡೆ, ಸಂಜೀವ ಪಾಟೀಲ, ಪ್ರಕಾಶ್ ರಾಠೋಡ, ಡಾ.ಶ್ರೀಕಾಂತ್ ಪಾಟೀಲ, ಬಸವರಾಜ ಮಹಾಜನಶೆಟ್ಟಿ, ದೈಹಿಕ ನಿರ್ದೇಶಕ ರವಿ ಗೋಲಾ, ಪ್ರಭು ಜಂಗಿನಮಠ ಸೇರಿದಂತೆ ಕಾಲೇಜಿನ ಬೋಧಕ ಮತ್ತು ಬೋಧಕೇತರು ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು.

# ರಫೀಕ ಶಿರೋಳಗೆ ರಾಜ್ಯ ಯುವ ಪ್ರಶಸ್ತಿ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪ್ರತೀ ವರ್ಷ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಕೊಡಮಾಡುವ ರಾಜ್ಯ ಯುವ ಪ್ರಶಸ್ತಿಗೆ ಭಾಜನರಾದ ತಾಲೂಕಿನ ಯುವ ಕಾಂಗ್ರೆಸ್ ಅಧ್ಯಕ್ಷ ರಫೀಕ ಶಿರೋಳ ಅವರು ಸವಣೂರು ತಾಲೂಕಿನ ಕಡಬ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿದರು.

# ಜ.31ರಂದು ವಿದ್ಯುತ್ ಗ್ರಾಹಕರ ಕುಂದು-ಕೊರತೆ ನಿವಾರಣಾ ಸಭೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ವಿಜಯಪುರ ಜಿಲ್ಲೆಯ ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಸಭೆಯನ್ನು ನಗರದ ಮನಗೂಳಿ ರಸ್ತೆಯಲ್ಲಿರುವ ಬಿಡಿಎ ಕಚೇರಿ ಹತ್ತಿರ ಅಧೀಕ್ಷಕ ಅಭಿಯಂತರರು ಕಾರ್ಯ ಮತ್ತು ಪಾಲನೆ ವೃತ್ತ ಕಚೇರಿ ಸಭಾಂಗಣದಲ್ಲಿ ಜನವರಿ 31 ರಂದು ಬೆಳಿಗ್ಗೆ 10-30ಕ್ಕೆ ಆಯೋಜಿಸಲಾಗಿದೆ.

ಜಿಲ್ಲೆಯ ವಿದ್ಯುತ್ ಗ್ರಾಹಕರು ಸಭೆಯಲ್ಲಿ ಭಾಗವಹಿಸಿ ತಮ್ಮ ಕುಂದು-ಕೊರತೆಗಳನ್ನು ನಿವಾರಿಸಿಕೊಳ್ಳುವಂತೆ ಹೆಸ್ಕಾಂ ಅಧಿಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಸಾವಿರದ ಸಂತ' ಸಾಕ್ಷ್ಯ ಚಿತ್ರದ ಪೋಸ್ಟರ್-ಟೀಸರ್ ಬಿಡುಗಡೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಬಸ್ ಡಿಪೋ ಹತ್ತಿರವಿರುವ ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದ 28ನೇ ಜಾತ್ರಾ ಮಹೋತ್ಸವದಲ್ಲಿ ಶ್ರೀ ಆದಿಶೇಷ ಪ್ರೊಡಕ್ಷನ್ಸ್ ಸಂಸ್ಥೆಯಡಿಯಲ್ಲಿ ನಿರ್ಮಾಣಗೊಂಡ ಲಿ.ಸಿದ್ದೇಶ್ವರ ಸ್ವಾಮೀಜಿಯವರ "ಸಾವಿರದ ಸಂತ" ಸಾಕ್ಷ್ಯ ಚಿತ್ರದ ಪೋಸ್ಟರ್ ಹಾಗೂ ಟೀಸರ್‌ನ್ನು ಬಾಳೆಹೊನ್ನೂರು ರಂಬಾಪೂರಿ ಪೀಠದ ಶ್ರೀಮದ್ರಂಬಾಪುರಿ ವೀರಸಿಂಹಾಸನಾಧೀಶ್ವರ ಜಗದ್ಗುರು ಪ್ರಸನ್ನರೇಣುಕ ಡಾ.ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರರು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ಅವರು, ರೇಣುಕಾಚಾರ್ಯರ, ಲಿಂ.ಸಿದ್ದಲಿಂಗ ಜಗದ್ಗುರುಗಳ ಹಾಗೂ ಜಗದ್ಗುರುಗಳಾದ ಗಂಗಾಧರ ಶ್ರೀಗಳ ಜೀವನ ಸಾಧನೆಯ ಸಾಕ್ಷ್ಯ ಚಿತ್ರವನ್ನು ಇದೇ ತಂಡವು ನಿರ್ಮಿಸುವಂತೆ ಹೇಳಿದರು. ಧರ್ಮ ಪೀಠಗಳ ಕಾರ್ಯ ಸಾಧನೆಗಳು ಜನಮಾನಸದಲ್ಲಿ ಅಜರಾಮರವಾಗುವಂತೆ ಈ ತಂಡ ಕಾರ್ಯ ನಿರ್ವಹಿಸಲಿ ಎಂದರು.



ಸಾವಿರದ ಸಂತ ಸಾಕ್ಷ್ಯ ಚಿತ್ರವನ್ನು ಶ್ರೀ ಆದಿಶೇಷ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ಮಿಸಲಾಗಿದೆ. ಪರ್ತಕರ್ತ ಹಾಗೂ ಸಾಹಿತಿ ಶಿವಾನಂದ ಹಿರೇಮಠ ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ನಟನೆಯ ಜತೆಗೆ ನಿರ್ಮಾಪಕರಾಗಿ ನಿಹಾನ್ ದೇಸಾಯಿ ಹಾಗೂ ಎಂ.ಗುರುರಾಜ ಕಾರ್ಯಕಾರಿ ನಿರ್ಮಾಪಕರಾಗಿ ಪೂಜಾ ವೀರಶೆಟ್ಟಿ ಕಾರ್ಯ ನಿರ್ವಹಣೆ ಮಾಡಿದ್ದಾರೆ. ಚಿತ್ರದ ಸಂಕಲನವನ್ನು ಶ್ರೀಜಯ್ ಬಿರಾದಾರ, ಸಹ ನಿರ್ದೇಶಕರಾಗಿ ಪವನ ಬೂದಿಹಾಳ, ಛಾಯಾಗ್ರಹಣವನ್ನು ಚಂದ್ರಸೇನ ಮಾಡಿದ್ದಾರೆ.

ಈ ಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ಬಾಲಕ ನಿಂಗನಗೌಡ ಪಾಟೀಲ, ನವೀನಕುಮಾರ, ಪೂಜಾ ವೀರಶೆಟ್ಟಿ ಸೇರಿದಂತೆ ಹಲವಾರು ನುರಿತ ಉತ್ತರ ಕರ್ನಾಟಕದ ಕಲಾವಿದರು ನಟನೆ ಮಾಡಿದ್ದಾರೆ. ಎರಡನೇ ಹಂತದ ಚಿತ್ರೀಕರಣ ಪ್ರಾರಂಭಗೊಂಡಿದ್ದು ಶೀಘ್ರದಲ್ಲಿ ಚಿತ್ರವು ಬಿಡುಗಡೆಗೊಳ್ಳಲಿದೆ ಎಂದು ನಿರ್ಮಾಪಕ ನಿಹಾನ್ ದೇಸಾಯಿ ಹೇಳಿದರು.

ಚಿತ್ರದ ಕುರಿತಂತೆ ಸಹ ನಿರ್ಮಾಪಕ ಎಂ.ಗುರುರಾಜ ಮಾತನಾಡಿದರು.

ಈ ವೇಳೆ ನಿರ್ಮಾಪಕರಾದ ನಿಹಾನ್ ದೇಸಾಯಿ, ಸಹ ನಿರ್ಮಾಪಕ ಎಂ.ಗುರುರಾಜ್ ಸಂಕಲನಕಾರ ಶ್ರೀ-ಜಯ್ ಬಿರಾದಾರ, ಶಾಸಕ ಅಶೋಕ ಮನಗೂಳಿ, ತಾಲೂಕು ದಂಡಾಧಿಕಾರಿ ಪ್ರದೀಪಕುಮಾರ ಹಿರೇಮಠ, ಅಶೋಕ ವಾರದ, ವಿರಾಜೇಂದ್ರ ಶ್ರೀಗಳು, ಡಾ.ಚಂದ್ರಶೇಖರ ಶ್ರೀಗಳು, ಮಳಲಿಮಠದ ಶ್ರೀಗಳು, ಆಲೂರು ಶ್ರೀಗಳು, ಸಾರಂಗಮಠದ ಶ್ರೀಗಳು, ಮಾಜಿ ಜಿ.ಪಂ.ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ ಹೂವಿನಹಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮೊಬೈಲ್

## ಕಾವ್ಯರಶ್ಮಿ

– ಶಾರದಾ ಗುಂಡೂರಾವ್
("ನಮ್ಮ ಕಥಾ ಅರಮನೆ" ಬರಹಗಾರರು)



ಗಾದೆ ಇದೆ ಊಟ ಬಲ್ಲವನಿಗೆ ರೋಗವಿಲ್ಲ
ಮೊಬೈಲ್ ಇಲ್ಲದವನಿಗೆ ಮರ್ಯಾದೆ ಇಲ್ಲ
ನಿಜ,ಮೊಬೈಲ್ ಕಾಲಯಾರೂ ತಡೆಯೋರಿಲ್ಲ
ಎಲ್ಲ ವಯೋಮಾನದವರಿಗೂ,ಇದು ಬೇಕಲ್ಲ

ಈಗಿನ ಮಕ್ಕಳಿಗೆ ಊಟಕೆ ಮೊಬೈಲ್ ಬೇಕು
ಅಡುಗೆಗೆ ಯೂಟ್ಯೂಬ್ ನೋಡಲೇ ಬೇಕು
ಅಮ್ಮನ ಅಡುಗೆ ರುಚಿಗೆ ಅಷ್ಟೇ ಸಾಕುಬೇಕು
ಇಂಟರ್‌ನೆಟ್ ಅಡಿಗೆ ಸಾಕಷ್ಟು ಬೇಕೇಬೇಕು

ದಕ್ಷಿಣ,ಉತ್ತರ ಪಾಶ್ಚಾತ್ಯದಡುಗೆ ಅಂಗೈಯಲ್ಲಿ
ಹುಳಿ, ಉಪ್ಪು ಖಾರ ದಳತೆ ಮೊಬೈಲ್ ನಲ್ಲಿ
ಅಳತೆ ಕೆಟ್ಟರೆ ಅದುಬೇರೇ ರುಚಿಯಾಗುವುದಿಲ್ಲಿ
ಮೊಬೈಲ್ ಇಲ್ಲದ ಜೀವನ ಸಾಧ್ಯವೇಇಲ್ಲ ಇಲ್ಲಿ.




ಫೋನ್ ಇಲ್ಲದ ಜೀವನ ಊಹೆಗೂಸಾಧ್ಯವಿಲ್ಲ.
ಒಬ್ಬರಿಗೊಬ್ಬರು ಪೂರಕವಾಗಿ ಹೋಗಿದ್ದೇವಲ್ಲ
ಈಗ ಇದು ಜಗತ್ತಿನ ಅವಿಭಾಜ್ಯ ಅಂಗವಾಗಿದೆಯಲ್ಲ
ಈಗ ಇದು ಬರೆಯಲೂ ಮೊಬೈಲ್ ಬೇಕಾಯ್ತಲ್ಲ

# ಮದುವೆ ಎಂಬ ಅನುಬಂಧ

## ಭಾವರಶ್ಮಿ



– ನಯನಾ ಹೆಬ್ಬಾರ್
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಪ್ರಪಂಚದಲ್ಲಿ ಅನಾದಿಕಾಲ ದಿಂದಲೂ ಮನುಷ್ಯನು ತಾನು ಧರ್ಮಯುಕ್ತನಾಗಿ ಬದುಕಲು ತನ್ನದೇ ಆದ ಧಾರ್ಮಿಕ ಕಟ್ಟುಪಾಡುಗಳನ್ನು ವಿಧಿಸಿಕೊಂಡ. ಎಂದರೆ ಜನನದಿಂದ ಮರಣದವರೆಗಿನ ಪ್ರತಿಯೊಂದು ಕಾರ್ಯಗಳು ಧಾರ್ಮಿಕ ಚೌಕಟ್ಟಿನೊಳಗೆ ಬರುವಂತೆ ಹಿಂದಿನವರು ಅನೇಕ ಶಾಸ್ತ್ರ ಸಂಪ್ರದಾಯ ವಿಧಿ ವಿಧಾನಗಳನ್ನು ರೂಪಿಸಿದರು. ಇದರಲ್ಲಿ ಪ್ರಧಾನಘಟ್ಟವೇ ವಿವಾಹ ಬಂಧ. ಇಲ್ಲಿ ಗಂಡು-ಹೆಣ್ಣು ಇಬ್ಬರನ್ನೂ ಧಾರ್ಮಿಕ ವಿಧಿ ವಿಧಾನಗಳಿಂದ, ಎಲ್ಲರ ಆಶೀರ್ವಾದಗಳಿಂದ, ಒಟ್ಟಾಗಿ ಬದುಕುವಂತೆ ಅನುಮತಿ ನೀಡುವ, ಮುಂದೆ ಧರ್ಮ, ಅರ್ಥ, ಕಾಮ ಮೋಕ್ಷಗಳಲ್ಲಿ ಅತಿಕ್ರಮಿಸದಂತೆ ಪರಸ್ಪರ ಅರಿತು ಬಾಳುವ ಬದುಕಿಗೆ ಮುನ್ನುಡಿ ಇಡುವುದೇ ಈ ಸುಂದರವಾದ ಬಂಧ.

ವಿವಾಹ ಎನ್ನುವುದು ಕೇವಲ ಎರಡು ಮನಸುಗಳ ಮಿಲನ ಮಾತ್ರ ಅಲ್ಲ ;ಎರಡು ಕುಟುಂಬಗಳ ಸಮ್ಮಿಲನ,ಎರಡು ಸಂಸ್ಕೃತಿಗಳ ಸಮಾಗಮ. ಇದು ಕೇವಲ ದೇಹಗಳ ಆಕರ್ಷಣೆಯಲ್ಲ ; ಎರಡು ಜೊತೆಗೂಡಿದ ಮನಸ್ಸುಗಳ ಉದಾತ್ತ ಜೀವನ ಪಯಣ. ಇಲ್ಲಿ ಇಬ್ಬ-ರಿಗೂ ಏನೇನು ಕರ್ತವ್ಯಗಳಿವೆಯೋ ಅವುಗಳನ್ನು ಆತ್ಮಾರ್ಥವಾಗಿ ಸ್ವಾರ್ಥ ವಿಲ್ಲದೆ ನಿಭಾಯಿಸುತ್ತಾ, ಪರಸ್ಪರ ಪೂರಕರಾಗಿ ಬದುಕುತ್ತಾ, ಎರಡು ಕುಟುಂಬಗಳ ಭಾಂದವ್ಯವನ್ನು ಬೆಸೆಯುತ್ತಾ ಪರಸ್ಪರ ಆದರ್ಶರಾಗಿ ಬದುಕುವ ಬಂಧವೇ ದಾಂಪತ್ಯ ಬಂಧನ. ಆರಂಭದ ದಿನಗಳಲ್ಲಿ ಸೌಂದರ್ಯದ ಆಕರ್ಷಣೆಗೆ ಮನಸೋತಿದ್ದರೂ, ಮುಂದಿನ ದಿನಗಳಲ್ಲಿ ಪರಸ್ಪರ ಸಮರ್ಪಣಾ ಭಾವ, ಪ್ರೀತಿ, ಸ್ನೇಹ,ಹೊಂದಿಕೊಳ್ಳುವ ಸ್ವಭಾವಗಳೇ ದಾಂಪತ್ಯ ಜೀವನದ ಯಶಸ್ಸಿಗೆ ಕಾರಣವಾಗುತ್ತದೆ. ಆಗಲೇ ಉಣಬಡಿಸುವವಳು ಆಳಲ್ಲ ಅನ್ನಪೂರ್ಣೆಯಾಗುತ್ತಾಳೆ ; ದುಡಿಯುವವನು ಜೀತದಾಳಾಗದೆ ಮನೆಯ ದೇವರಾಗುತ್ತಾನೆ. ಮಕ್ಕಳು ಮನೆಯ ಕಲಶವಾಗುತ್ತಾರೆ ; ಮನೆ ಮಂದಿರವಾಗುತ್ತದೆ...

ಮದುವೆಯಾದ ಮೇಲೆ ಪರಸ್ಪರ ಇಬ್ಬರ ಕುಟುಂಬಗಳನ್ನು ಇಬ್ಬರು ತಮ್ಮ ಕುಟುಂಬದಂತೆ ಪ್ರೀತಿಸುವ ಮನಸ್ಥಿತಿ ಇದ್ದಾಗ ಬದುಕು ನವಿರಾಗಿ ಸಾಗುತ್ತದೆ. ಯಾವುದೇ ಮನಸ್ತಾಪಗಳಿದ್ದರೂ



ಅದನ್ನು ದೊಡ್ಡದಾಗಿಸಿಕೊಳ್ಳದೆ ಅಲ್ಲಲ್ಲಿ ಮಾತಿನಲ್ಲೇ ಮುಗಿಸಿಕೊಂಡು ಸಹಜವಾಗಿ ಮುಂದೆ ಸಾಗಿದಾಗ ಮಾತ್ರ ಅನುಬಂಧವು ಬಂಧನವಾಗದೆ ಉಳಿಯುತ್ತದೆ. ಮುಂದೆ ಈ ಪ್ರೀತಿಯು ಮುಪ್ಪಿನಲ್ಲಿಯೂ ಮಸುಕಾಗದೆ, ಆಧಾರವಾಗುವ ಈ ಅನುಬಂಧ ಅನುಭಾವಿಕತೆಯನ್ನು ತಲುಪುತ್ತದೆ.

ಈ ದಾಂಪತ್ಯ ಎನ್ನುವುದು ಇಂತಹ ಅನುಬಂಧವಾಗಬೇಕಿದ್ದರೆ ನಾನು ನೀನು ಎನ್ನುವ ಸಂಕುಚಿತಂತೆ ದೂರವಾಗಿ, ನಾವು ಎನ್ನುವ ಪ್ರಜ್ಞೆ ಮೂಡಿ, ಅಪರಿಮಿತವಾದ, ಲೆಕ್ಕಾಚಾರಗಳಿಲ್ಲದ, ಪ್ರೀತಿ ಸ್ನೇಹ ನಂಬಿಕೆ ಇರಬೇಕು. ನಾ ನಿನಗಾಗಿಯೇ ಇರುವೆ ಎನ್ನುವ ಅಂತ:ಕರಣವಿದ್ದಾಗ ಬದುಕಿನ ಯಾವ ಕಷ್ಟಗಳು ದಾಂಪತ್ಯವನ್ನು ವಿರಸಗೊಳಿಸಲಾರದು. ಮನುಷ್ಯರೆಂದಾದ ಮೇಲೆ ಯಾರೂ ಪರಿಪೂರ್ಣರಲ್ಲ. ಪರಸ್ಪರ ವಿರುದ್ಧ ಸ್ವಭಾವಗಳಿರಬಹುದು, ಹೊಂದಿಕೊಳ್ಳಲು ಕಷ್ಟವಾಗಬಹುದು. ಆಗ ಈ ಬದುಕು ಬಂಧನವೆನಿಸಿದರೂ ಪರಸ್ಪರ ಅನನ್ಯತೆಯ ಭಾವದಲ್ಲಿ ನಡೆದಾಗ ಅನುಬಂಧವೆನಿಸಿಕೊಳ್ಳುತ್ತದೆ.

ಆದರೆ ಅದಕ್ಕಿಂತ ಮೊದಲೇ ಅಹಂನ ಕೋಟೆಯನ್ನು ಕಟ್ಟಿಕೊಂಡು, ನನ್ನಿಷ್ಟದಂತೆ ನೀನಿಲ್ಲ ಎಂಬ ತೀರ್ಪನ್ನು ಪರಸ್ಪರ ಮೂಡಿಸಿಕೊಂಡು, ಸ್ವಭಾವ ವೈರುಧ್ಯದಲ್ಲಿಯೇ ಮುಂದೆ ಸಾಗಿದಾಗ ವೈವಾಹಿಕ ಬದುಕು ಮನಸ್ಸಿಗೆ ಹಿಂಸೆ ನೀಡುವ ಬಂಧನವಾಗುತ್ತದೆ. ಮುಂದೆ ಇದು ವಿವಾಹ ವಿಚ್ಛೇದನಕ್ಕೂ ಕಾರಣವಾಗುವುದು ಇಂದು ಸಾಮಾನ್ಯ ಸಂಗತಿ.

ಮದುವೆ ಎಂಬುದು ಒಂದು ಉದಾತ್ತ ಕಲ್ಪನೆಯ ಅನುಬಂಧ. ಇಲ್ಲಿ ತಾಳಿದವನಷ್ಟೇ ಸುಂದರವಾಗಿ ಬಾಳಿಯಾನು. ಅನಿವಾರ್ಯ ಸಂದರ್ಭಗಳಲ್ಲಿ ಕಾನೂನಿನ ಸಹಾಯ ಖಂಡಿತಾ ಇರುತ್ತದೆ. ಆದರೆ ಚಿಕ್ಕ ಚಿಕ್ಕ ವಿಷಯಗಳಿಗೂ ಮದುವೆಯ ಅನಂತರದ ಬದುಕನ್ನು ಬಂಧನವೆಂದು ಭಾವಿಸಿ ಅದರಿಂದ ಬಿಡುಗಡೆಯನ್ನು ಬಯಸುವುದು ಸರಿಯಲ್ಲ. ಏಕೆಂದರೆ ಅನುಬಂಧವನ್ನು ಅನುಭವಿಸುವುದರಲ್ಲಿ ಇರುವಷ್ಟು ಸವಿ ಬಿಡುಗಡೆಯಲ್ಲಿಲ್ಲ.

